ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 | ಸಂಚಿಕೆ 38 | ಸೆಪ್ಟಂಬರ್ 18, 1983 | ಬೆಲೆ 60 ಪೈಸೆ

ದ. ಕೊರಿಯಾ ವಿಮಾನದ ಮೇಲೆ ರಷ್ಯನ್ ಧಾಳಿ

ಅಮೇರಿಕಾದ ಪ್ರಚೋದನೆ ಕಾರಣ

ಸಿ.ಪಿ.ಐ. (ಎಂ) ಕೇಂದ್ರ ಸಮಿತಿ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯು ಸೆಪ್ಟೆಂಬರ್ 1ರ ರಾತ್ರಿ ದಕ್ಷಿಣ ಕೊರಿಯಾದ ಪ್ರಯಾಣಿಕರ ವಿಮಾನದ ಮೇಲೆ ರಶ್ಯಾ ನಡೆಸಿದ ಧಾಳಿಯು ಅಮೇರಿಕಾದಿಂದ ಪೂರ್ವನಿಯೋಜಿತಗೊಂಡದ್ದು ಎಂಬುದಾಗಿ ತಿಳಿಸಿದೆ. ಅಮೇರಿಕಾದ ರೇಗನ್ ಸರ್ಕಾರ ಮತ್ತು ಅದರ ಗೂಢಚರ್ಯ ಸಂಸ್ಥೆಗಳು ತಮ್ಮ ಥರ್ಮೋ - ನ್ಯೂಕ್ಲಿಯರ್ ಯುದ್ಧಕ್ಕೆ ಅನುಕೂಲ ಉಂಟುಮಾಡಿಕೊಳ್ಳುವ ಕ್ರೂರ ಉದ್ದೇಶಕ್ಕಾಗಿ ಮೊದಲೇ ತಯಾರಿಸಿದ ಈ ಘಟನೆಯಿಂದಾಗಿ 269 ಮಂದಿ ಮುಗ್ಧ ಪ್ರಯಾಣಿಕರು ಬಲಿಯಾದದ್ದಕ್ಕೆ ತನ್ನ ತೀವ್ರ ದುಃಖವನ್ನು ವ್ಯಕ್ತಪಡಿಸಿದೆ.

ವಿಮಾನವು ಸೋವಿಯತ್ ವಾಯು ಗಡಿಯೊಳಗೆ ಪ್ರವೇಶಿಸಿದ್ದು ಆಕಸ್ಮಿಕವಲ್ಲ ಎಂಬುದು ಸಾಬೀತಾಗಿದೆ. ಬದಲಾಗಿ ರಶ್ಯಾದ ಸೇನಾ ನೆಲೆಗಳಿರುವ ಸೂಕ್ಷ್ಮ ಪ್ರದೇಶದಲ್ಲಿ ಬೇಹುಗಾರಿಕೆ ನಡೆಸುವ ಪೂರ್ವನಿಯೋಜಿತ ಉದ್ದೇಶದಿಂದಲೇ ವಿಮಾನವು ರಶ್ಯಾದ ಗಡಿಯನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿದೆ.

"ತಯಾರು ಮಾಡಲ್ಪಟ್ಟ" ಈ ಘಟನೆಯನ್ನು ಉಪಯೋಗಿಸಿಕೊಂಡು ರೇಗನ್ ಮತ್ತು ಅವರ ಸರ್ಕಾರ ಸೋವಿಯತ್ ಯೂನಿಯನ್ ವಿರುದ್ಧ ಸಮಾಜವಾದೀ ವ್ಯವಸ್ಥೆಯ ವಿರುದ್ಧ ಮತ್ತು ಸೋವಿಯತ್ ಶಾಂತಿ ನೀತಿಯ ವಿರುದ್ಧ ದ್ವೇಷಪೂರಿತ ಪ್ರಚಾರವನ್ನು ನಡೆಸುತ್ತಿದೆ. ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ಉದ್ರೇಕಿಸಲು ಮತ್ತು ಯುದ್ಧದ ವಾತಾವರಣವನ್ನು ಸೃಷ್ಟಿಸಲು ಈ ಘಟನೆಯನ್ನು ಬಳಸಿಕೊಳ್ಳಲಾಗುತ್ತಿದೆ. ಪ್ರತಿಗಾಮೀ ಪಾಶ್ಚಿಮಾತ್ಯ ಶಕ್ತಿಗಳೂ ಕೂಡ ರೇಗನ್ನರೊಡನೆ ಧ್ವನಿಗೂಡಿಸಿ "ಯಾವುದೇ ವಿಮಾನವಾದರೂ ಸರಿ ತನ್ನಿಷ್ಟದಂತೆ ಯಾವುದೇ ದೇಶದ ಸಾರ್ವಭೌಮತ್ವವನ್ನು ಉಲ್ಲಂಘಿಸಿ ಯಾವುದೇ ಪ್ರದೇಶವನ್ನಾದರೂ ಪ್ರವೇಶಿಸುವ ಹಕ್ಕು ಇರಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿದೆ. ಇದು ತೀರಾ ಅಪಾಯಕಾರೀ ಸಿದ್ಧಾಂತವಾಗಿದ್ದು ಇದು ಎಲ್ಲಾ ನಾಗರಿಕ ಅಂತರಾಷ್ಟ್ರೀಯ ಸಂಬಂಧಗಳನ್ನು ಅಂತ್ಯಗೊಳಿಸುವಂಥದ್ದಾಗಿದೆ. ಮತ್ತು ಯಾವ ಸ್ವಾತಂತ್ರ್ಯ ಪ್ರೇಮಿ ದೇಶವೂ ಒಪ್ಪಿಕೊಳ್ಳಲು ಅಸಾಧ್ಯವಾದುದಾಗಿದೆ.

ಶಸ್ತ್ರಾಸ್ತ್ರ ನಿಯಂತ್ರಣ ಮಾತುಕತೆಗಳಲ್ಲಿನ ಅಮೇರಿಕಾದ ನಕಾರಾತ್ಮಕ ನಿಲುವು, ಪಶ್ಚಿಮ ಯೂರೋಪಿನಲ್ಲಿ ಪರ್ಶಿಂಗ್ ಮತ್ತು ಕ್ರೂಯಿಸ್ ಕ್ಷಿಪಣಿಗಳನ್ನು ಸ್ಥಾಪಿಸುವ ಅದರ ಪ್ರಯತ್ನ ಸೋವಿಯತ್ ಯೂನಿಯನ್‌ನ ವಿರುದ್ಧ ಮಿಲಿಟರಿ ಶ್ರೇಷ್ಠತೆಯನ್ನು ಪಡೆದುಕೊಳ್ಳುವ ಉದ್ದೇಶ. ನ್ಯೂಕ್ಲಿಯರ್ ಯುದ್ಧ ಪ್ರಯತ್ನವನ್ನು ಪ್ರಬಲಗೊಳಿಸುವ ಮತ್ತು ಅಮೇರಿಕಾ ಮತ್ತು ಪಶ್ಚಿಮ ಯೂರೋಪುಗಳಲ್ಲಿ ಬೆಳೆಯುತ್ತಿರುವ ಶಾಂತಿ ಚಳವಳಿಯನ್ನು ದಿಕ್ಕು ತಪ್ಪಿಸಲು ಅದು ಮಾಡುತ್ತಿರುವ ಪ್ರಯತ್ನಗಳ ಮುಂದುವರಿಕೆಯಾಗಿ ಈ ಮೇಲ್ಕಂಡ ಘಟನೆ ನಡೆದಿದೆ.

ಆಂತರಿಕವಾಗಿ ರೇಗನ್ನರು ತನ್ನ ಎಂ. ಎಕ್ಸ್ ಕ್ಷಿಪಣಿ ಯೋಜನೆಯನ್ನು ಮುಂದುವರಿಸಲು, ಮಿಲಿಟರಿ ವೆಚ್ಚವನ್ನು ಅಧಿಕಗೊಳಿಸಲು ಮತ್ತು ಮುಂದಿನ ವರ್ಷದ ತಮ್ಮ ಮರು-ಚುನಾವಣೆಯ ಪ್ರಚಾರಕ್ಕಾಗಿ ಈ ಘಟನೆಯನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತಿದ್ದಾರೆ.

ಸಿ.ಪಿ.ಐ (ಎಂ)ನ ಕೇಂದ್ರ ಸಮಿತಿಯು ಅಮೇರಿಕದ ಈ ಧೋರಣೆಯನ್ನು ಖಂಡಿಸಿದೆ. ಅದು ಸೋವಿಯತ್ ಯೂನಿಯನ್ನಿಗೆ ಮತ್ತು ನ್ಯೂಕ್ಲಿಯರ್ ಶಸ್ತ್ರಗಳ ನಿಯಂತ್ರಣಕ್ಕೆ ಅದು ಸೂಚಿಸಿರುವ ಮಹತ್ವಪೂರ್ಣ ಸಲಹೆಗಳಿಗೆ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ.

ನಗರವನ್ನು ನಡುಗಿಸಿರುವ ಕಟ್ಟಡ ದುರಂತ

ಬೆಂಗಳೂರಿನ ಸುಬೇದಾರ್ ಛತ್ರಂ ರಸ್ತೆಯ ಕಪಾಲಿ ಚಿತ್ರಮಂದಿರದ ಬಳಿಯಲ್ಲಿ ನಿರ್ಮಾಣವಾಗುತ್ತಿದ್ದ ಬಹು ಅಂತಸ್ತಿನ ಕಟ್ಟಡವೊಂದು ಸೆಪ್ಟೆಂಬರ್ 12ರಂದು ಮಧ್ಯಾಹ್ನ 3-30 ಗಂಟೆಗೆ ಕುಸಿದು ಬಿದ್ದ ಪರಿಣಾಮವಾಗಿ ಅನೇಕರು ಸತ್ತಿದ್ದಾರೆ. ಸತ್ತವರು ಎಷ್ಟೆಂಬುದು ತಿಳಿದು ಬಂದಿಲ್ಲವಾದರೂ ಗುಲ್ಬರ್ಗ, ಬಿಜಾಪುರಗಳಿಂದ ಕಟ್ಟಡದ ಕೂಲಿ ಕೆಲಸಕ್ಕಾಗಿ ಬಂದಿದ್ದ 70 ಕುಟುಂಬಗಳು ಪೂರ್ಣವಾಗಿ ನಾಶವಾಗಿವೆ ಎಂಬ ವಿಷಯ ಸತ್ತಿರುವವರ ಸಂಖ್ಯೆಯನ್ನು ಅಂದಾಜು ಮಾಡಲು ಸಹಾಯಕವಾಗಬಹುದು.

60×80 ಅಳತೆಯಿರುವ ಸ್ಥಳದಲ್ಲಿ 9 ಅಂತಸ್ತಿನ ಕಟ್ಟಡ ಕಟ್ಟಲು ಅನುಮತಿ ನೀಡಿದ ಅಧಿಕಾರಿಗಳು, ಕಟ್ಟಡಗಳನ್ನು ಪರೀಕ್ಷಿಸಿದ ಎಂಜಿನಿಯರುಗಳು, ಸಿಮೆಂಟು, ಕಬ್ಬಿಣಗಳನ್ನು ತಿಂದುಹಾಕುವ ಕಂಟ್ರಾಕ್ಟರುಗಳು. ಇವಕ್ಕೆಲ್ಲ ಕಾರಣರಾಗಿರುವ ಕಟ್ಟಡದ ಮಾಲೀಕರು ಇಷ್ಟೊಂದು ಜನರನ್ನು ಬಲಿತೆಗೆದುಕೊಂಡಿದ್ದಾರೆ. ಕಟ್ಟಡಕ್ಕೆ ಅಡಿಪಾಯವನ್ನು ಭದ್ರವಾಗಿ ಹಾಕಿರಲಿಲ್ಲ. ಆದ್ದರಿಂದಲೇ ಕಟ್ಟಡ ಕುಸಿದಿದೆ ಎಂಬ ಕೆಲವರ ವಾದವನ್ನು ತಳ್ಳಿಹಾಕುವಂತಿಲ್ಲ.

ಅವಶೇಷಗಳನ್ನು ತೆಗೆಯುವ ಕಾರ್ಯ ಇನ್ನೂ ನಡೆಯುತ್ತಿದೆ. ಹೊರ ಜಗತ್ತನ್ನು ಕಾಣಲು ತುಡಿಯುತ್ತಿರುವವರ ಆರ್ತನಾದಗಳು ಭಗ್ನ ಭವನದ ಅಡಿಯಿಂದ ಕೇಳಿಬರುತ್ತಲೇ ಇದೆ. ಅನೇಕರನ್ನು ಜೀವಂತವಾಗಿ ಹೊರತೆಗೆಯುತ್ತಿರುವ, ಅದಕ್ಕಾಗಿ ಹಗಲೂ ರಾತ್ರಿ ಶ್ರಮಿಸುತ್ತಿರುವ ಸೈನಿಕರು, ಪೋಲೀಸರು ಮತ್ತಿತರರು ಖಂಡಿತವಾಗಿಯೂ ಅಭಿನಂದನೀಯರು.

ಈ ಭೀಕರ ದುರಂತದಿಂದಾಗಿ ನಮ್ಮ ಸರಕಾರ ಕಲಿಯಬೇಕಾದ ಪಾಠವೆಂದರೆ ಇನ್ನು ಮುಂದೆ ಆದರೂ ಬಹು ಅಂತಸ್ತುಗಳ ಕಟ್ಟಡಗಳಿಗೆ ಅನುಮತಿನೀಡುವ ಮುನ್ನ ಸಮರ್ಪಕ ಸ್ಥಳ ಪರಿಶೀಲನೆ ನಡೆಸಿ, ತಜ್ಞರ ಸಲಹೆ, ಅಭಿಪ್ರಾಯಗಳನ್ನು ಪಡೆದುಕೊಂಡು ಕಾರ್ಯೋನ್ಮುಖರಾಗುವುದು ತೀರಾ ಅಗತ್ಯ.

ದುರಂತದಲ್ಲಿ ಮೃತಪಟ್ಟವರಿಗಾಗಿ 'ಐಕ್ಯರಂಗ' ಶೋಕವನ್ನು ವ್ಯಕ್ತಪಡಿಸುವುದರೊಂದಿಗೆ ಘಟನೆಯನ್ನು ಕುರಿತು ನ್ಯಾಯಾಂಗ ತನಿಖೆ ನಡೆಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತದೆ.

ಬಿಹಾರದಲ್ಲಿ

ಶಾಲಾ ಮಕ್ಕಳ ಮೇಲೆ ಗುಂಡಿನ ಮಳೆ

ಸ್ಥಳೀಯ ಭೂ ಮಾಲಿಕರೊಂದಿಗೆ ಪೋಲೀಸರು ಸೇರಿಕೊಂಡು ಗ್ರಾಮೀಣ ಜನರ ಮೇಲೆ ಧಾಳಿ ನಡೆಸುವುದು ಬಿಹಾರ ರಾಜ್ಯದಲ್ಲಿ ದಿನನಿತ್ಯದ ದೃಶ್ಯ.

ತೀರಾ ಇತ್ತೀಚಿನ ಘಟನೆಯೆಂದರೆ ಆಗಸ್ಟ್ 16 ರಂದು ಸಂತಾಲ್ ಪರಗಣ ಪ್ರದೇಶದ ಪನ್ವಾರ ಎಂಬ ಹಳ್ಳಿಯಲ್ಲಿ ಮುಗ್ಧ ಶಾಲಾ ಮಕ್ಕಳ ಮೇಲೆ ಪೋಲೀಸರು ಗುಂಡಿನ ಧಾಳಿ ನಡೆಸಿದ್ದು, ಗುಂಡೇಟಿನಿಂದಾಗಿ ಐದು ಮಂದಿ ಬಾಲಕರು ತೀವ್ರವಾಗಿ ಗಾಯಗೊಂಡಿದ್ದಾರೆ.

ಆಗಸ್ಟ್ 15ರಂದು ಮಕ್ಕಳು ತಮ್ಮ ಶಾಲೆಯಲ್ಲಿ ಧ್ವಜಾರೋಹಣ ನಡೆಸಿ ಮನೆಗಳಿಗೆ ಮರಳುತ್ತಿದ್ದಾಗ ಸ್ಥಳೀಯ ಪೋಲೀಸರು ಅವರನ್ನು ಅಡ್ಡಗಟ್ಟಿ ಹಾಡುಗಳನ್ನು ಹೇಳಬೇಕೆಂದು ಒತ್ತಾಯ ಪಡಿಸಿದಾಗ ಹೆದರಿದ ಮಕ್ಕಳು ನಿರಾಕರಿಸಿದರು. ಆಗ ಅವರ ಬಳಿಯಲ್ಲಿದ್ದ ಪುಸ್ತಕ, ವಸ್ತುಗಳನ್ನು ಪೋಲಿಸರು ಕಸಿದುಕೊಂಡರು.

ಸ್ಥಳೀಯ ಭೂ ಮಾಲೀಕರಿಂದ ಉತ್ತೇಜಿತರಾದ ಪೋಲಿಸರು ಈ ಘಟನೆಯನ್ನು ತಮಗಾದ ಅವಮಾನವೆಂದು ಭಾವಿಸಿದರು. ಮರುದಿನ ಮಕ್ಕಳು ತಮ್ಮ ವಸ್ತುಗಳನ್ನು ಪಡೆದುಕೊಳ್ಳಲು ಬಂದಾಗ ಪೋಲಿಸರು ಅವರ ಮೇಲೆ ಗುಂಡು ಹಾರಿಸಿದರು.

ಹಳ್ಳಿಗರು ಇದನ್ನು ಕಂಡು ಕೆರಳಿ ಪ್ರತಿ ಧಾಳಿ ನಡೆಸಿದಾಗ ಆ ಪೋಲಿಸರಿಗೆ ಆಶ್ರಯ ಕೊಟ್ಟವರೂ ಭೂ ಮಾಲಕರೇ.

ನಂತರ ಘಟನೆಯ ಸ್ಥಳಕ್ಕೆ ಡಿ. ವೈ. ಎಫ್. ಐ. ನ ಬಿಹಾರ ರಾಜ್ಯ ಘಟಕದ ಅಧ್ಯಕ್ಷ ಅರ್ಜುನ್ ಪ್ರಸಾದ್ ಮತ್ತು ಕಾರ್ಯದರ್ಶಿ ಎಸ್. ಪಿ. ತಿವಾರಿ ಎಸ್. ಎಫ್. ಐ. ನ ಅಧ್ಯಕ್ಷ ಖಲೀಲ್ ಅಹ್ಮದ್ ಸಿ. ಪಿ. ಐ. (ಎಂ) ನ ಭಾಗಲ್ಪುರ ಜಿಲ್ಲಾ ಸಮಿತಿಯ ಸದಸ್ಯರುಗಳು ಡಿ. ವೈ. ಎಫ್. ಐ.ನ ಕೇಂದ್ರ ಕಾರ್ಯಕಾರೀ ಸಮಿತಿ ಸದಸ್ಯ ಸುನೀತ್ ಚೋಪ್ರಾ ಅವರುಗಳು ಭೇಟಿ ನೀಡಿ ಈ ಘಟನೆಯನ್ನು ಖಂಡಿಸಿ ನ್ಯಾಯಾಂಗ ತನಿಖೆಗಾಗಿ ಸರಕಾರವನ್ನು ಒತ್ತಾಯಿಸಿದ್ದಾರೆ. ಅಲ್ಲದೆ ಈ ಘಟನೆಗೆ ಕಾರಣರಾದವರನ್ನು ಬಂಧಿಸಬೇಕೆಂದೂ ಗಾಯಗೊಂಡವರಿಗೆ ಪರಿಹಾರ ಕೊಡಬೇಕೆಂದೂ ಒತ್ತಾಯಿಸಿದ್ದಾರೆ.

ಕಲ್ಕತ್ತಾದಲ್ಲಿ ಬೃಹತ್ ಶಾಂತಿ ಮೆರವಣಿಗೆ

ಕಾರ್ಮಿಕ ಸಂಘಗಳ ವಿಶ್ವ ಒಕ್ಕೂಟ (ಡಬ್ಲ್ಯೂ. ಎಫ್. ಟಿ ಯು) ಮತ್ತು [illegible]ಗ್ ಶಾಂತಿ ಸಮ್ಮೇಳನದ ಕರೆಯಂತೆ ಸೆಪ್ಟೆಂಬರ್ 1ರಂದು ಕಲ್ಕತ್ತಾದಲ್ಲಿ ಬೃಹತ್ ಶಾಂತಿ ಮೆರವಣಿಗೆ ನಡೆಯಿತು. ಸಾವಿರಗಟ್ಟಲೆ ಹೆಂಗಸರು, ಮಕ್ಕಳು ಇದರಲ್ಲಿ ಭಾಗವಹಿಸಿದ್ದರು. ಕಲ್ಕತ್ತಾ ನಗರದ ಮೂಲೆ ಮೂಲೆಯಿಂದ ಶಾಂತಿ ಪ್ರಿಯ ಜನತೆ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನೆರೆದಿದ್ದರು. ಇದರಲ್ಲಿ ಕಾರ್ಮಿಕರು, ಶಿಕ್ಷಕರು, ಅಧ್ಯಾಪಕರು, ವಕೀಲರು, ಕಲಾವಿದರುಗಳು, ಸಿನೆಮಾ-ರಂಗಭೂಮಿ ಕಾರ್ಯಕರ್ತರು, ಪತ್ರಕರ್ತರು ಹೀಗೆ ಎಲ್ಲಾ ವಿಭಾಗಗಳ ಜನ ಇದರಲ್ಲಿ ಭಾಗವಹಿಸಿದ್ದರು. ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ, ಸುತ್ತಮುತ್ತಲ ಜಿಲ್ಲೆಗಳಿಂದ ದೊಡ್ಡ, ಪುಟ್ಟ ಮೆರವಣಿಗೆಗಳು ಬಂದು ಮೈದಾನವನ್ನು ತುಂಬತೊಡಗಿದವು. ಮಧ್ಯಾಹ್ನ ಅಲ್ಲಿಂದ ಮೆರವಣಿಗೆ ಪ್ರಾರಂಭಗೊಂಡಿತು. ಸಿ.ಐ.ಟಿ.ಯು, ಎ.ಐ.ಟಿ.ಯು.ಸಿ, ಟಿ.ಯು.ಸಿ.ಸಿ, ಯು ಟಿ ಯು.ಸಿ. ಮತ್ತಿತರ ಸಾಮೂಹಿಕ ಸಂಘಟನೆಗಳ ನಾಯಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ನಂತರ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿ.ಐ.ಟಿ.ಯು.ನ ಕಾಂ| ಮನೋರಂಜನ್ ರಾಯ್ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಕಾರ್ಮಿಕ ನಾಯಕರುಗಳು ನ್ಯೂಕ್ಲಿಯರ್ ಯುದ್ಧದ ಅಪಾಯಗಳು, ಮತ್ತು ಇಡೀ ಮಾನವ ಕುಲದ ಮೇಲೆ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಒಡ್ಡಿರುವ ಅಪಾಯಗಳನ್ನು ವಿವರಿಸಿದರು.

ಪ. ಬಂಗಾಲ ಮುಖ್ಯಮಂತ್ರಿ ಜ್ಯೋತಿ ಬಸು ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ವಿಶ್ವದಾದ್ಯಂತ ನಡೆಯುತ್ತಿರುವ ಶಾಂತಿಗಾಗಿನ ಹೋರಾಟಗಳು ಅಮೇರಿಕಾದ ಯುದ್ಧಕೋರ ನೀತಿಯನ್ನು ಸೋಲಿಸಲು ಹೊಸ ಸ್ಫೂರ್ತಿಯನ್ನು ನೀಡುತ್ತವೆ ಎಂದು ನುಡಿದರು.

ಶ್ರೀರಾಮಪುರ

ಡಿ.ವೈ.ಎಫ್.ಐ. ಘಟಕದ ರಚನೆ

ಶ್ರೀರಾಮಪುರದ ಆರ್. ಗೋಪಾಲಸ್ವಾಮಿ ಐಯ್ಯರ್ಸ್ ಕಾಲೋನಿಯಲ್ಲಿ ಡಿ.ವೈ.ಎಫ್.ಐ.ನ ಸರ್ವಸದಸ್ಯರ ಸಭೆ ನಡೆಯಿತು. ಈ ಸಭೆಯಲ್ಲಿ ಸ್ಥಳೀಯ ಜನತೆಯ ಸಮಸ್ಯೆಗಳಾದ ನೀರಿನ ಸಮಸ್ಯೆ, ರಸ್ತೆ ಪುನರ್ನಿರ್ಮಾಣ, ಕಕ್ಕಸರೂಂಗಳ ಪುನಃರಚನೆ ಇವುಗಳ ಬಗ್ಗೆ ಚರ್ಚೆ ನಡೆಸಲಾಯಿತು. ಅಲ್ಲದೆ ಮುಂದಿನ ಸಂಘಟನೆಯನ್ನು ಬೆಳೆಸಲು ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಸಂಚಾಲಕರಾಗಿ ಕಾಂ! ಗೋಪಾಲಕೃಷ್ಣರವನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಅಲ್ಲದೆ ಸಮಿತಿಯಲ್ಲಿ ಕೆಳಕಂಡ 18 ಮಂದಿ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ಶಿವಣ್ಣ ಡಿ. ರುದ್ರಪ್ಪ, ಪರಮೇಶ ಕೃಷ್ಣ, ವರದರಾಜು, ಗಮೇಶ್ ಗಂಗರಾಜು, ರಾಮದಾಸ್, ರಮೇಶ್ ಶಿವರುದ್ರಪ್ಪ, ಭಾಸ್ಕರ, ಗೋವಿಂದ ರಾಜು, ಪುಟ್ಟಸ್ವಾಮಿ, ಶಿವಶಂಕರ್, ನರಸಿಂಹಯ್ಯ ಸಿ. ಯಾದವಮೂರ್ತಿ, ಲಿಂಗದೇವರು, ವೇಣುಗೋಪಾಲ

ಚಿಂತಾಮಣಿ ತಾಲ್ಲೂಕು

ಡಿ.ವೈ.ಎಫ್.ಐ. ಘಟಕದ ಉದ್ಘಾಟನೆ

ದಿನಾಂಕ 21-8-83ರಂದು ಚಿಂತಾಮಣಿಯ ಪ್ರವಾಸಿ ಮಂದಿರದಲ್ಲಿ ಡಿ.ವೈ.ಎಫ್.ಐ. ಸರ್ವಸದಸ್ಯರ ಸಭೆ ನಡೆದು ಚಿಂತಾಮಣಿ ತಾಲ್ಲೂಕು ಸಮಿತಿಯನ್ನು ರಚಿಸಲಾಯಿತು. ಸಭೆಗೆ 75ಕ್ಕೂ ಹೆಚ್ಚು ಸದಸ್ಯರು ನಾನಾ ಭಾಗಗಳಿಂದ ಬಂದಿದ್ದರು.

ಸಭೆಗೆ ಮುಖ್ಯ ಅಥಿತಿಯಾಗಿ ಆಗಮಿಸಿದ್ದ ಕೋಲಾರ ಜಿಲ್ಲಾ ಸಂಚಾಲಕ ಹಾಗೂ ರಾಜ್ಯ ಸಂಘಟನಾ ಸಮಿತಿಯ ಸದಸ್ಯ ಕಾಂ! ಕೆ. ವಿ. ಸತ್ಯನಾರಾಯಣ ಅವರು, ಡಿ.ವೈ.ಎಫ್.ಐ.ನ ಕಾರ್ಯಕ್ರಮ, ಸಂವಿಧಾನ, ಅಮೆರಿಕನ್ ಸಾಮ್ರಾಜ್ಯಶಾಹಿಗಳು ಯುದ್ಧ ಪಿಪಾಸುಗಳಾಗಿರುವುದು. ಪಾಕಿಸ್ತಾನದ ಜಿಯಾ ವುಲ್ ಹಕ್‌ನ ಸರ್ವಾಧಿಕಾರದ ಅಡಿಯಲ್ಲಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಧಮನ, ಶ್ರೀಲಂಕಾದಲ್ಲಿನ ಜನಾಂಗೀಯ ಹತ್ಯಾಕಾಂಡ, ಅಸ್ಸಾಂ, ತ್ರಿಪುರಾ ಹಾಗೂ ಈಶಾನ್ಯ ಭಾರತದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಭಾರತವನ್ನು ಒಡೆಯಲು ಪ್ರಯತ್ನಿಸುತ್ತಿರುವುದು ಹಾಗೂ DYFI ಅಸ್ಸಾಂನ ಪ್ರತ್ಯೇಕತಾ ಚಳುವಳಿಗಾರರ ವಿರುದ್ಧ ಹೋರಾಟ ನಡೆಸುವ ಅನಿವಾರ್ಯತೆ ಮತ್ತು ವಿಜಯನಗರ ಉಕ್ಕಿನ ಕಾರ್ಖಾನೆಯ ಬಗ್ಗೆ ಕೇಂದ್ರದ ಮಲತಾಯಿ ಧೋರಣೆ ಮುಂತಾದ ಸಮಸ್ಯೆಗಳನ್ನು ವಿವರಿಸಿ, ವಿದ್ಯಾರ್ಥಿ ಯುವಜನರು ರಾಷ್ಟ್ರದ ಸಮಗ್ರತೆಗಾಗಿಯೂ, ಅನಕ್ಷರತೆ, ನಿರುದ್ಯೋಗ, ಕಡುಬಡತನ, ಮುಂತಾದ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಬೇಕೆಂದು ಹೇಳಿದರು.

ನಂತರ ಹನ್ನೆರಡು ಜನರ ತಾಲ್ಲೂಕ್ ಸಮಿತಿಯನ್ನು ಆಯ್ಕೆ ಮಾಡಿ, ಅದರ ಸಂಚಾಲಕರಾಗಿ ಕಾ! ಸಿ. ವಿ. ಎಂ. ಸ್ವಾಮಿ ಅವರನ್ನು ಆರಿಸಲಾಯಿತು.

ಧಾರವಾಡ

ಡಿ.ವೈ.ಎಫ್.ಐ. ಸಭೆ

17–7–83 ರಂದು ಸಂಜೆ ಧಾರವಾಡದ ಎನ್. ಜಿ. ಓ. ಹಾಲಿನಲ್ಲಿ ಧಾರವಾಡದ DYFI ಕಾರ್ಯಕರ್ತರು ಹಾಗೂ ಹಿತೈಷಿಗಳ ಸಭೆ ನಡೆಯಿತು. ರಾಜ್ಯ ಸಂಘಟನಾ ಸಮಿತಿಯ ಸದಸ್ಯರಾದ ಕಾ! ಚಿದಾನಂದ ಅವರು ಸ್ವಾಗತಿಸಿದರು. ಮುಖ್ಯ ಅಥಿತಿಯಾಗಿ ಆಗಮಿಸಿದ್ದ ರಾಜ್ಯ ಸಂಚಾಲಕ ಕಾ! ಎಸ್. ಶಿವರಾಂ ಅವರು ಅಂದು ರಾಜ್ಯ ಸಮಿತಿಯು ತೆಗೆದುಕೊಂಡ ನಿರ್ಣಯಗಳನ್ನು ವಿವರಿಸಿ ಧಾರವಾಡದ DYFI ಸಂಘಟನೆಯನ್ನು ಬಲಪಡಿಸಬೇಕೆಂದು ಕರೆ ನೀಡಿದ ಅವರು, 1983 ರ ಸದಸ್ಯತ್ವವನ್ನು ತ್ವರಿತವಾಗಿ ಮುಗಿಸಿ ಮುಂದಿನ ಕಾರ್ಯಕ್ರಮಗಳನ್ನು ಎದುರು ನೋಡಬೇಕೆಂದು ವಿನಂತಿಸಿದಲ್ಲದೆ. ವಿದ್ಯಾರ್ಥಿ ಯುವ ಜನತೆ, ರೈತ–ಕಾರ್ಮಿಕ, ಅಕ್ಷರಸ್ಥ, ಅನಕ್ಷರಸ್ಥ ಹಾಗೂ ಉದ್ಯೋಗಿ, ನಿರುದ್ಯೋಗಿಗಳನ್ನು DYFI ಗೆ ಸೇರಿಸುವ ಅಗತ್ಯ ಕಾರಣಗಳನ್ನು ವಿವರಿಸಿದರು.

ಅಮರಾವತಿ

ಡಿ.ವೈ.ಎಫ್.ಐ. ಘಟಕದ ರಚನೆ

ದಿನಾಂಕ 7-8-83 ರಂದು ಬಳ್ಳಾರಿ ಜಿಲ್ಲೆಯ ಅಮರಾವತಿ ಟೌನ್‌ನಲ್ಲಿ D. Y. F. I ಸಭೆ ನಡೆಯಿತು. ಈ ವ್ಯಾಪ್ತಿಯ DYFI, SFI, ಮತ್ತು ಜನತಾ ಹಾಗೂ ಪ್ರಗತಿಪರ ಯುವಜನ ವೇದಿಕೆಗಳ ಬೆಂಬಲದಲ್ಲಿ ಟೌನ್ ಮುನ್ಸಿಪಾಲಿಟಿ ಚುನಾವಣೆಯಲ್ಲಿ ಸ್ಪರ್ಧಿಸಿ ಜಯಗಳಿಸಿದ ಕಾ! ಟಿ. ವೆಂಕಟೇಶ್ ಅವರು ಅಧ್ಯಕ್ಷತೆ ವಹಿಸಿದ್ದರು

ಜಿಲ್ಲಾ ಸಂಚಾಲಕರಾದ ಕಾ! ಜಂಬಯ್ಯನಾಯಕ ಅವರು DYFI ನ ಧ್ಯೇಯೋದ್ದೇಶಗಳನ್ನು ಸಭೆಯಲ್ಲಿ ವಿವರಿಸಿದರು.

ನಂತರ DYFI ಘಟಕವನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಕಾ! ಟಿ. ಗಾಲಪ್ಪ, ಉಪಾಧ್ಯಕ್ಷರುಗಳಾಗಿ ಬಿ. ಆನಂದ ಮತ್ತು ರಾಮಪ್ಪ ಹೆಚ್. ಕೆ. ಕಾರ್ಯದರ್ಶಿಯಾಗಿ ಪುರಸಭಾ ಸದಸ್ಯ ಟಿ. ವೆಂಕಟೇಶ್, ಸಹಕಾರ್ಯದರ್ಶಿಯಾಗಿ ವಿ. ಗೋವಿಂದ, ಖಜಾಂಚಿಯಾಗಿ ಅಂಜಿನೇಯುಲು ರನ್ನು ಚುನಾಯಿಸಿ ಸಮಿತಿಗೆ ಡಿ. ಗಣೇಶ್, ಬಾಲಾಜಿಸಿಂಗ್, ಡಿ. ಸತ್ಯನಾರಾಯಣ, ಬಿ. ಯಲ್ಲಪ್ಪ, ರಾಜಾಹುಸೇನ್, ನಾಗರಾಜ ಮರಡಿ, ಹೆಚ್. ನಾಗಪ್ಪ, ವೆಂಕಟೇಶ್ ಮತ್ತು ಹಮೀದ್ ಅವರುಗಳನ್ನು ಆರಿಸಲಾಯಿತು. ಜಿಲ್ಲಾ ಸಹ ಸಂಚಾಲಕರಾದ ಕಾ! ರಾಮಚಂದ್ರ ನಾವಡ ಅವರಿಂದ ಸ್ವಾಗತ ಹಾಗೂ ಶರಣಪ್ಪ ಶೆಟ್ಟಿ ಅವರಿಂದ ವಂದನಾರ್ಪಣೆ ನಡೆಯಿತು.

ರೈತ ಸಂಘದ ಕಾರ್ಯಕರ್ತರಿಗೆ ತರಬೇತಿ ಶಿಬಿರ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ದೊಡ್ಡ ತೋಟದಲ್ಲಿ ರೈತ ಸಂಘದ ತಾಲೂಕು ಮಟ್ಟದ ಕಾರ್ಯಕರ್ತರ ತರಬೇತಿ ಶಿಬಿರವು ಸೆಪ್ಟೆಂಬರ್ 7 ಮತ್ತು 8ರಂದು ಯಶಸ್ವಿಯಾಗಿ ನೆರವೇರಿತು. ಬೇರೆ ಬೇರೆ ಗ್ರಾಮಗಳಿಂದ ಬಂದಿದ್ದ ಸುಮಾರು ನೂರು ಮಂದಿ ಕಾರ್ಯಕರ್ತರು ಭಾಗವಹಿಸಿದ್ದ ತರಬೇತಿ ಶಿಬಿರವು 7ರಂದು ಬೆಳಿಗ್ಗೆ ರೈತ ಸಂಘದ ತಾಲ್ಲೂಕ್ ಸಮಿತಿಯ ಉಪಾಧ್ಯಕ್ಷರಾದ ಹಿರಿಯ ಮುಂದಾಳು ಕಾ. ಮುತ್ತಡ್ಕ ರಾಮಯ್ಯ ಗೌಡರಿಂದ ಧ್ವಜಾರೋಹಣ ನಡೆಸುವುದರೊಂದಿಗೆ ಪ್ರಾರಂಭವಾಯ್ತು. ತಾಲ್ಲೂಕ್ ಸಮಿತಿ ಕಾರ್ಯದರ್ಶಿ ಕಾ ಭಾಸ್ಕರ್ ಅವರಿಂದ ಸ್ವಾಗತ ಮತ್ತು ಪ್ರಧಾನ ಕಾರ್ಯದರ್ಶಿ ಕಾ. ಮೋನಪ್ಪ ಗೌಡರಿಂದ ತರಬೇತಿ ಶಿಬಿರದ ಕುರಿತು ಭಾಷಣವಾದ ಮೇಲೆ ತಾಲ್ಲೂಕ್ ಸಮಿತಿಯ ಅಧ್ಯಕ್ಷರಾದ ನ್ಯಾಯವಾದಿ ಕಾ. ಸೂರ್ಯನಾರಾಯಣಭಟ್ ಅವರು ಶಿಬಿರವನ್ನು ಉದ್ಘಾಟಿಸಿದರು. ಉದ್ಘಾಟನಾ ಭಾಷಣ ಮಾಡುತ್ತಾ ಅಖಿಲಭಾರತ ಕಿಸಾನ್ ಸಭಾ ಮತ್ತು ಅದರ ಭಾಗವಾದ ಕರ್ನಾಟಕ ಪ್ರಾಂತ ರೈತ ಸಂಘದ ಹೋರಾಟದ ಪರಂಪರೆ ಮತ್ತು ಚರಿತ್ರೆಯನ್ನು ಸೂಕ್ಷ್ಮವಾಗಿ ಅವರು ನೆನಪಿಸಿದರು. ಎರಡು ದಿನಗಳ ಶಿಬಿರವು ಕಾ. ಎಂ. ಕೆ. ಭಟ್ ಅವರ ಮಾರ್ಗದರ್ಶನದಲ್ಲಿ ನಡೆಯಿತು.

ಗ್ರಾಮೀಣ ಪರಿಸ್ಥಿತಿ, ಬದಲಾಗುತ್ತಿರುವ ಕೃಷಿ ಸಂಬಂಧಗಳು, ಹಳ್ಳಿಯಲ್ಲಿರುವ ವರ್ಗಗಳು, ಸಮಸ್ಯೆಗಳಿಗೆ ಪರಿಹಾರದ ದಾರಿ, ಕಾರ್ಮಿಕ ವರ್ಗ ಮತ್ತು ರೈತರೊಳಗಿನ ಸಖ್ಯತೆ, ಅಖಿಲ ಭಾರತ ಕಿಸಾನ್ ಸಭಾದ ಭಾಗವಾಗಿರುವ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಇತರೆ ರೈತ ಸಂಘಗಳಿಗಿರುವ ವ್ಯತ್ಯಾಸ ರೈತ ಸಂಘಟನೆ ಕಟ್ಟುವ ವಿಧಾನ, ಹೋರಾಟ ಮತ್ತು ಸಂಘಟನೆಗಳನ್ನು ಬೆಳೆಸುವ ವಿಧಾನ, ರಾಜಕೀಯ ಪ್ರಜ್ಞೆಯನ್ನು ಬೆಳೆಸುವುದು, ರೈತ ಸಂಘದ ಸಂವಿಧಾನ ಇವೇ ಮೊದಲಾದವುಗಳ ಕುರಿತು ತಮ್ಮ ಒಂದೂವರೆ ದಿನದ ಪಾಠಗಳಲ್ಲಿ ಕಾಂ|| ಎಂ. ಕೆ. ಮನದಟ್ಟಾಗುವಂತೆ ವಿವರಿಸಿದರು. ರೈತ ಸಂಘಟನೆ ಕಟ್ಟುವುದರಲ್ಲಿ ತಮ್ಮ ಅನುಭವಗಳನ್ನು ಹೇಳುತ್ತಾ ಗ್ರಾಮ ಮಟ್ಟದಿಂದಲೇ ಮುಖಂಡತ್ವ ಬೆಳೆಸಿ ಸದಸ್ಯತ್ವವನ್ನು ಕೂಡಿಸಿ, ಸಮಸ್ಯೆಗಳ ಅಭ್ಯಾಸ ಹಾಗೂ ಅವುಗಳ ಪರಿಹಾರಕ್ಕಾಗಿ ಹೋರಾಟ ನಡೆಸುವುದರ ಅವಶ್ಯಕತೆಯನ್ನು ಕಾಂ! ಎಂ. ಕೆ. ಒತ್ತಿಹೇಳಿದರು. ಹೋರಾಟಗಳನ್ನು ನಡೆಸಿ ಪ್ರಭಾವವನ್ನು ಹೆಚ್ಚಿಸುವುದರೊಂದಿಗೇ ಸದಸ್ಯತ್ವವನ್ನು ಮಾಡಿ ಸಂಘಟನೆಯನ್ನು ಬೆಳೆಸಲು ಗಮನ ವಿತ್ತಲ್ಲಿ ಪ್ರಭಾವನನ್ನು ಸಂಘಟನೆಯನ್ನಾಗಿ ಮಾರ್ಪಡಿಸುವುದು ಸಾಧ್ಯ ಎಂದ ಕಾಂ! ಎಂ. ಕೆ. ಅವರು ಈ ಕೆಲಸದಲ್ಲಿ ಹಿಂದೆ ಬಿದ್ದರುವುದರಿಂದ ಸಂಘಟನೆ ವ್ಯಾಪಕವಾಗಿ ಬೆಳೆದಿಲ್ಲ ಎಂದರು. ಇದು ಮತ್ತು ಇನ್ನೂ ಅನೇಕ ರೀತಿಯ ನಿಶ್ಯಕ್ತಿಗಳನ್ನು ಹೋಗಲಾಡಿಸಿಕೊಂಡು ಕಾರ್ಮಿಕ ವರ್ಗದ ನೇತೃತ್ವದ ಕಡೆಗೆ ಹಳ್ಳಿಯ ಬಡವರು ಹೋಗುವಂತೆ ಮಾಡುವ ದೃಷ್ಟಿಯನ್ನಿರಿಸಿ ತಾಲ್ಲೂಕಿನ ಪ್ರತಿಯೊಂದು ಹಳ್ಳಿಯಲ್ಲೂ ಸಮರಶೀಲ ಸಂಘಟನೆಯನ್ನು ಕಟ್ಟಲೂ ಅವರು ಕರೆ ಇತ್ತರು.

ಶಿಬಿರದಲ್ಲಿ ಭಾಗವಹಿಸಿದ್ದವರ ಪೈಕಿ ಕಾಂ! ರಾಮಯ್ಯಗೌಡ, ಕಾಂ! ಎಂ. ಎಸ್. ಬಾಲಕೃಷ್ಣಗೌಡ, ಕಾಂ! ಭಾಸ್ಕರ್, ಮತ್ತು ಇನ್ನೂ ಕೆಲವು ಸಂಗಾತಿಗಳು ಸಂಘಟನೆಯನ್ನು ಕಟ್ಟಿದ್ದಾಗಿನ ಅನುಭವ ಮತ್ತು ಸಮಸ್ಯೆಗಳ ಕುರಿತು ಮಾತನಾಡಿದರು. ಶಿಬಿರದ ಕೊನೆಯಲ್ಲಿ ಶಿಬಿರದ ಉಪಯುಕ್ತತೆ ಕುರಿತು ಅಭಿಪ್ರಾಯವನ್ನು ಸಂಗ್ರಹಿಸಲಾಯಿತು. ಶಿಬಿರದಲ್ಲಿ ಭಾಗವಹಿಸಿದವರಲ್ಲಿ ಬಹುಪಾಲು ಮಂದಿ ಕೃಷಿ ಕೆಲಸಗಾರ ಹಾಗೂ ಬಡ ರೈತರೇ ಆಗಿದ್ದು, ಕೆಲವು ಮಂದಿ ಮಧ್ಯಮ ರೈತವರ್ಗಕ್ಕೆ ಸೇರಿದವರಿದ್ದರು.

ಬೆಂಗಳೂರು

ಡಿ.ವೈ.ಎಫ್.ಐ. ಜಿಲ್ಲಾ ಸಮಿತಿಯ ಪುನರ್‌ರಚನೆ

9–8–83 ರಂದು ಡಿ.ವೈ.ಎಫ್. ಬೆಂಗಳೂರು ಜಿಲ್ಲಾ ಸಮಿತಿಯ ಸಭೆ ಸೇರಿದ್ದಿತು. ಸಭೆಯಲ್ಲಿ ಭಾಗವಹಿಸಿದ್ದ ರಾಜ್ಯ ಸಂಚಾಲಕರಾದ ಕಾ! ಎಸ್. ಶಿವರಾಂ ಅವರು ಕಳೆದ ಸಮ್ಮೇಳನದಿಂದ ಇಲ್ಲಿಯವರೆವಿಗೆ ನಡೆದಿರುವ ಚಟುವಟಿಕೆಗಳು ಹಾಗೂ ಲೆಕ್ಕ ಪತ್ರಗಳ ಬಗ್ಗೆ ವಿವರಿಸಿದರು. ಮತ್ತು ಕಳೆದ ಮೇ 4 ರಂದು ನಡೆದ ರಾಜ್ಯ ಸಂಘಟನಾ ಸಮಿತಿಯ ಪುನರ್ ರಚನೆ, ನಂತರ ಬಂದಿರುವ ತೀರ್ಮಾನಗಳನ್ನು ವಿವರಿಸಿ, ಬೆಂಗಳೂರು ಜಿಲ್ಲಾ ಸಮಿತಿಯನ್ನು ಪುನರ್ ಸಂಘಟಿಸುವ ಅಗತ್ಯವನ್ನು ಹೇಳಿದರು.

ನಂತರ ಸಂಘಟನಾ ಸಮಿತಿಯನ್ನು ರಚಿಸಿ. ಕಾರ್ಯದರ್ಶಿ ಸ್ಥಾನದಿಂದ ಎಸ್. ಶಿವರಾಂ ಅವರನ್ನು ಬಿಡುಗಡೆ ಮಾಡಿ, ಜಿಲ್ಲಾ ಸಂಚಾಲಕರಾಗಿ ಕಾಂ! ಎನ್. ಚೆಲುವರಾಜ್ ಅವರನ್ನು ಆಯ್ಕೆ ಮಾಡಲಾಯಿತು.

ಸಂಘಟನಾ ಸಮಿತಿಯಲ್ಲಿ ಕಾಂ! ಎಸ್. ಸಂಬ್ಬೇಗೌಡ, ಶ್ರೀನಿವಾಸ್, ಗುರುಸ್ವಾಮಿ, ಮೂರ್ತಿ, ಚಂದ್ರು, ರಂಗಸ್ವಾಮಿ, ಶೈಲೇಶ್, ಕೃಷ್ಣಮೂರ್ತಿ, ಎಂ. ಬಿ. ಕುಮಾರ್, ರಾಮನ್, ಮುರಳೀಧರ ನಾಯ್ಡು, ನಾರಾಯಣಪ್ಪ, ಸ್ವರ್ಣಾಂಭ ಸೌದಾಮಣಿ, ಪ್ರಮೀಳ, ಸಿ. ರಾಜು, ಶಿವಶಂಕರ್, ಜಯಶೇಖರ್, ಹೆಚ್. ಹಿ. ಜನಕರಾಜ್ ಇವರುಗಳನ್ನು ಆಯ್ಕೆ ಮಾಡಲಾಯಿತು.

ರಾಯಚೂರು

ಗ್ರಾಹಕರ ಚಳುವಳಿಗೆ ಸಿದ್ಧತೆ

ದಿನಾಂಕ 4–9–83ರಂದು ಸಿ. ಪಿ. ಐ. (ಎಂ) ರಾಯಚೂರು ಜಿಲ್ಲಾ ಸಮಿತಿ ಸಭೆ ನಡೆದು, ಬೆಲೆಏರಿಕೆ ಬಗ್ಗೆ ದೀರ್ಘ ಚರ್ಚೆ ನಡೆಸಿ ನ್ಯಾಯಬೆಲೆ ಅಂಗಡಿಗಳ ಬಗ್ಗೆ ಗ್ರಾಹಕರ ಪ್ರತಿಕ್ರಿಯೆಯನ್ನು ಗಮನದಲ್ಲಿರಿಸಿ ಅಕ್ಟೋಬರ್ ತಿಂಗಳಲ್ಲಿ ಜಿಲ್ಲೆಯಾದ್ಯಂತ ಅಗತ್ಯ ವಸ್ತುಗಳ ಸರಿಯಾದ ಸರಬರಾಜು ಮಾಡಲು ಒತ್ತಾಯಿಸಿ, ಗ್ರಾಹಕರ ಚಳುವಳಿಯನ್ನು ಸಭೆ, ಸಮಾವೇಶ, ಸತ್ಯಾಗ್ರಹಗಳ ಮುಖಾಂತರ ನಡೆಸಬೇಕೆಂದು ತೀರ್ಮಾನಿಸಲಾಗಿದೆ

ದಿನಾಂಕ 11-8-83 ರಂದು ಪಕ್ಷದ ರಾಜ್ಯ ಸಮಿತಿಯ ಕರೆಯ ಮೇರೆಗೆ, ಜಿಲ್ಲೆಯ ಪುರ ತಾಲ್ಲೂಕುಗಳಾದ, ರಾಯಚೂರು, ಮಾನ್ವಿ, ಹಾಗೂ ಸಿಂಧನೂರುಗಳಲ್ಲಿ ಮೆರವಣಿಗೆಯನ್ನು ತೆಗೆದು ನ್ಯಾಯಬೆಲೆ ಅಂಗಡಿಗಳ ಮುಖಾಂತರ ಅಗತ್ಯ ವಸ್ತುಗಳನ್ನು ಸಬ್ಸಿಡಿ ದರದಲ್ಲಿ ಸರಬರಾಜು ಮಾಡಲು ಒತ್ತಾಯಿಸಿ ಮನವಿ ಪತ್ರವನ್ನು ಸಲ್ಲಿಸಲಾಗಿತ್ತು.

ರಾಯಚೂರು ನಗರದಲ್ಲಿ ಒಳ್ಳೆಯ ಅಕ್ಕಿಯನ್ನು ಕಾರ್ಡಿಗೆ ಐದು ಕಿಲೋ, ಒಳ್ಳೆಣ್ಣೆ ಒಂದು ಕಿಲೋ, ಸಕ್ಕರೆ ಅರ ಕಿಲೋ ವಿತರಣೆ ಮಾಡಲು ಜಿಲ್ಲಾಧಿಕಾರಿಯವರು ಒಪ್ಪಿ, ಅವಶ್ಯಕತೆಯಾಧಾರವಾಗಿ ಸರಬರಾಜಿಗೆ ಸರಕಾರಕ್ಕೆ ತಿಳಿಸುವುದಾಗಿ ಆಶ್ವಾಸನೆ ಕೊಟ್ಟ ನಂತರ, ಪಕ್ಷದ ಕಾರ್ಯಕರ್ತರು; ನಗರದ ಬಡವರ ಹಾಗೂ ಮಧ್ಯಮ ವರ್ಗದವರ ಬೀದಿಗಳಿಗೆ ಹೋಗಿ, ಜಿಲ್ಲಾಧಿಕಾರಿಯವರ ಜೊತೆ ನಡೆದ ಚರ್ಚೆಯನ್ನು ವಿವರಿಸಿ, ಬೆಲೆಏರಿಕೆ ಸಮಸ್ಯೆಯನ್ನು ತಡೆಯಲು ತಾತ್ಕಾಲಿಕವಾಗಿ, 2000 ಜನರಿಗಿಂದ ರಂತೆ ನ್ಯಾಯಬೆಲೆ ಅಂಗಡಿಗಳ ಮುಖಾಂತರ ಅಗತ್ಯ ವಸ್ತುಗಳನ್ನು ಪಡೆಯಲು ಬೀದಿಗಿಳಿಯಬೇಕೆಂದು ವಿನಂತಿಸಿಕೊಂಡರು.

ಆಹಾರ ಸಮಸ್ಯೆ ಮತ್ತು ಭೂಸುಧಾರಣೆ

–ಹರೇಕೃಷ್ಣ ಕೋನಾರ್

ಪಶ್ಚಿಮಬಂಗಾಲದ, ಅಷ್ಟೇಏಕೆ, ಸಮಸ್ತ ಭಾರತ ದೇಶದ ರೈತ ಚಳುವಳಿಯಲ್ಲಿ ಅತ್ಯಂತ ಸ್ಮರಣೀಯ ಹಾಗೂ ಅತ್ಯಂತ ಪ್ರೀತಿಪಾತ್ರವಾದ ಹೆಸರು–ಹರೇಕೃಷ್ಣ ಕೋನಾರ್. ಕಾಂ. ಕೋನಾರ್ ಭಾರತದ ಕೃಷಿರಂಗದ ಪರಿಸ್ಥಿತಿಗಳ, ಬೇಸಾಯ ಸಂಬಂಧೀ ಪದ್ಧತಿಗಳ ವ್ಯಾಪಕವಾದ ಹಾಗೂ ಆಳವಾದ ಅಧ್ಯಯನ ಮಾಡಿದ್ದರು, ಭಾರತದ ಭೂಸಮಸ್ಯೆಯ ಬಗ್ಗೆ ಅವರ ಅತ್ಯಂತ ಆಪ್ತ ಜ್ಞಾನದಿಂದಾಗಿಯೇ ಭಾರತ ಸರಕಾರದ ಗೃಹ ಮಂತ್ರಾಲಯ ಐ.ಎ.ಎಸ್. ಅಧಿಕಾರಿಗಳ ತರಬೇತಿಗಾಗಿ ನಡೆಸುವ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ಅಕಾಡೆಮಿಯಲ್ಲಿ ಭೂವ್ಯವಸ್ಥೆಯ ಬಗ್ಗೆ ಮಾತನಾಡಲು ಅವರಿಗೆಆಹ್ವಾನ ಬಂದದ್ದು. ಆದರೆ ಅಖಿಲ ಭಾರತ ಕಿಸಾನ್ ಸಭಾಕ್ಕೆ 1969 ರಿಂದ 1974 ಜುಲೈ 23 ರಂದು ಅವರು ನಿಧನ ರಾಗುವವರೆಗೆ ಪ್ರಧಾನ ಕಾರ್ಯದರ್ಶಿಯಾಗಿದ್ದ, ಸಿ ಪಿ ಐ(ಎಂ)ನ ಕೇಂದ್ರ ಸಮಿತಿಯ ಸದಸ್ಯರಾಗಿದ್ದ ಕಾಂ. ಕೋನಾರ್ ಸಹಜವಾಗಿಯೇ ಒಣ ಪಂಡಿತರೇನೂ ಆಗಿರಲಿಲ್ಲ. ವಾಸ್ತವವಾಗಿ ಅವರು ಹೆಚ್ಚಿನ ಲೇಖನಗಳನ್ನು ರೈತ ಚಳವಳಿಯಲ್ಲಿ ಜನಾಂದೋಲನದಲ್ಲಿ ಒಂದು ಕಾರ್ಯಭಾರವನ್ನು ಮುಗಿಸಿ ಇನ್ನೊಂದನ್ನು ಕೈಗೆತ್ತಿಕೊಳ್ಳುವ ನಡುವಿನ ಅಲ್ಪಕಾಲಾವಧಿಯ ವಿರಾಮದಲ್ಲಿ ಬರೆದಿದ್ದರು. ಆದ್ದರಿಂದಲೇ ಅವರ ಲೇಖನಗಳೆಲ್ಲಾ ಅತ್ಯಂತ ಶ್ರೀಮಂತ ಹಾಗೂ ಕ್ರಿಯಾಶೀಲ ಅಭಿವ್ಯಕ್ತಿಗಳಾಗಿವೆ.

ಬಂಗಾಲಿ ಭಾಷೆಯಲ್ಲಿನ ಅವರ ಕೃತಿಗಳ ಆಯ್ದ ಲೇಖನಗಳ ಇಂಗ್ಲಿಷ್ ಸಂಗ್ರಹ "ಸೆಲೆಕ್ಟೆಡ್ ವರ್ಕ್ಸ್"ನಿಂದ ಆರಿಸಿದ ಲೇಖನವೊಂದರ ಸಂಗ್ರಹಾನುವಾದವನ್ನು ಇಲ್ಲಿ ಕೊಡುತ್ತಿದ್ದೇವೆ. ಇದನ್ನು ಕಾಂ. ಕೋನಾರ್ ಬಂಗಾಲೀ ಪತ್ರಿಕೆ "ದೇಶ್ ಹಿತೈಷಿ" ಯಲ್ಲಿ 1966ರಲ್ಲಿ ಬರೆದಿದ್ದರು. 17 ವರ್ಷಗಳ ಹಿಂದೆ ಬರೆದಿದ್ದರೂ ಈ ಲೇಖನಗಳ ಅಂಕೆ–ಸಂಖ್ಯೆಗಳು ಹಳೆಯದಾಗಿವೆಯೇ ಹೊರತು ಲೇಖನದ ವಸ್ತು ಈಗಲೂ ಅಷ್ಟೇ ಸಾಮಯಿಕವಾಗಿದೆ.

ಆಳುವ ವರ್ಗಗಳ ವಕ್ತಾರರು ಸ್ವಾತಂತ್ರ್ಯದ ನಂತರದ ಈ 19ವರ್ಷಗಳವರೆಗೂ ಆಹಾರದ ಬಿಕ್ಕಟ್ಟನ್ನು ಸಮರ್ಥವಾಗಿ ಎದುರಿಸುತ್ತೇವೆ. ಆಹಾರ ಉತ್ಪಾದನೆ ಹೆಚ್ಚಿಸುತ್ತೇವೆ, ಆಹಾರದಲ್ಲಿ ಸ್ವಾವಲಂಬಿತರಾಗುತ್ತೇವೆ ಎಂದು ಸಿಹಿಯಾದ ಮಾತುಗಳಲ್ಲಿ ಜನರನ್ನು ಮರುಳುಮಾಡುತ್ತ ಬಂದಿದ್ದಾರೆ. ಅನೇಕ ಸಲ ದೊಡ್ಡ ನೀರಾವರಿ ಯೋಜನೆಗಳ ಬಗ್ಗೆ ಕೃಷಿಯ ಸುಧಾರಿತ ರೂಪದ ಬಗ್ಗೆ, ಸಮಾನ ಹಂಚಿಕೆಯ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ಹೊಸ ಹೊಸ ಅಂಕಿ ಅಂಶಗಳಿಂದ ಜನರನ್ನು ಭ್ರಮೆಯಲ್ಲಿ ಹಾತ್ತ ಬಂದಿದ್ದಾರೆ.

ಈ ಎಲ್ಲ ಭರವಸೆ, ಭವಿಷ್ಯನುಡಿಗಳು ಬಿಸಿಲುಗುದುರೆಯಂತೆ ಕರಗಿ ಹೋಗುತ್ತಿವೆ. ಇಡೀ ದೇಶದ ತುಂಬ ಎರಡನೆ ಮಹಾಯುದ್ಧದ ನಂತರದ ದಿನಗಳಲ್ಲಿ, ಕೃತಕವಾಗಿ ಸೃಷ್ಟಿಸಲಾದ ಆಹಾರದ ಬಿಕ್ಕಟ್ಟು ಶಾಶ್ವತವಾಗಿರುವುದನ್ನು ನೋಡುತ್ತಿದ್ದೇವೆ. ವಿಶಾಲ ಭಾರತದ ಉದ್ದಗಲಕ್ಕೂ ಕೋಟಿ ಕೋಟಿ ಜನ ಈ ಬಿಕ್ಕಟ್ಟಿನಲ್ಲಿ ಸಿಕ್ಕು ಒದ್ದಾಡುತ್ತಿದ್ದಾರೆ. ಸರಕಾರದ ನಂಬಲಾಗದ ಅಂಕಿ–ಅಂಶಗಳ ಪ್ರಕಾರವೇ 1960-61ರ 82 ಮಿಲಿಯನ್ ಟನ್‌ಗಳಿಂದ 1965ರಲ್ಲಿ 72 ಮಿಲಿಯನ್ ಟನ್‌ಗಳಿಗೆ ಆಹಾರ ಉತ್ಪಾದನೆ ಇಳಿದಿದೆ. ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಎಂಬ ಮಾತು ದೂರ ಉಳಿಯಿತು. ಇನ್ನೂ ಕೊರತೆಯು ಸತತವಾಗಿ ಹೆಚ್ಚುತ್ತಿದೆ. ಅಮೇರಿಕದ ಗೋಧಿಯ ಮೇಲೆ ಅವಲಂಬಿಸುವುದು ಹೆಚ್ಚುತ್ತಿದೆ. ಅಮೇರಿಕದ ಹೀನ ಸಾಮ್ರಾಜ್ಯಶಾಹಿಯನ್ನು ದೇಶದೊಳಗಡೆ ತೂರಿಕೊಳ್ಳಲು ತೆರೆದುಬಿಟ್ಟು, ದೇಶದ ಸ್ವಾಭಿಮಾನಕ್ಕೆ ಧಕ್ಕೆ ತಂದುಕೊಂಡು, ಬ್ರಿಟನ್ ಮುಂತಾದ ರಾಷ್ಟ್ರಗಳ ಸಾಗಾಣಿಕೆ ದರಗಳಿಗಿಂತ ಹೆಚ್ಚಿನ ದರತೆತ್ತು ಅಮೇರಿಕದ ಅಧಿಕ ಗೋಧಿಯನ್ನು ಮತ್ತು ದನ ತಿನ್ನುವ ಮಿಲೊವನ್ನು ಜನರಿಗೆ ತಿನ್ನಲು ತರಿಸಿಕೊಳ್ಳಲಾಗುತ್ತಿದೆ. ಇಷ್ಟೆಲ್ಲ ಆಮದು ಇದ್ದರೂ ಕೊರತೆ ನೀಗುತ್ತಿಲ್ಲ ಏಕೆ ?

ದೇಶದ ಕೂಲಿಕಾರರು, ರೈತರು, ಮಧ್ಯಮವರ್ಗದಜನತೆಗೆ ಈ ಬಿಕ್ಕಟ್ಟು ಉರುಲು ತರುತ್ತಿದೆಯಷ್ಟೇ ಅಲ್ಲ ಇಡೀ ಆರ್ಥಿಕತೆಯನ್ನು ಬಿಕ್ಕಟ್ಟು ವ್ಯಾಪಿಸಿಕೊಂಡಿದೆ. ದೇಶವನ್ನು ಹರಾಜಿಗೆ ಹಾಕಲು ಆಳುವ ವರ್ಗಕ್ಕೆ ಅಮೇರಿಕದ ಒತ್ತಡ ಹೆಚ್ಚುತ್ತಿದೆ; ಇದು ರೂಪಾಯಿಯ ಅಪಮೌಲೀಕರಣದಲ್ಲಿ ವ್ಯಕ್ತವಾಗುತ್ತಿದೆ. ಜನತೆ. ಸರಕಾರದ ಭ್ರಮಾತ್ಮಕ ಪ್ರಚಾರದ ಹೊಗೆ ಪರದೆಯನ್ನು ಹರಿದುಹೊರಬಂದು ನಿಜವಾದ, ಮೂಲಭೂತ ವೈಜ್ಞಾನಿಕ ಕಾರಣಗಳನ್ನು ಅರಿಯಬೇಕಾಗಿದೆ.

ಬಿಕ್ಕಟ್ಟಿನ ಲಕ್ಷಣಗಳು

ಸಾಮಾನ್ಯ ರೈತ, ತನ್ನ ಅಲ್ಪ ಉತ್ಪನ್ನವನ್ನು ಸುಗ್ಗಿಯ ತಕ್ಷಣ ಕಡಮೆ ಬೆಲೆಗೆ ಮಾರುವ ಒತ್ತಾಯಕ್ಕೊಳಗಾಗಿರುತ್ತಾನೆ. ಆದರೆ ಕೆಲವೇ ತಿಂಗಳ ನಂತರ ಆ ಬೆಲೆ ಗಗನಕ್ಕೇರುವುದು. (ಆಗ ಅವನು ಕೊಳ್ಳುವವನೂ ಆಗಿರುತ್ತಾನೆ) ಸರಕಾರವೇ ರೈತರಿಂದ ಮಧ್ಯಮ ದರ್ಜೆ ಬತ್ತವನ್ನು 15 ರೂಪಾಯಿಗೆ ಮಣದಂತೆ ಕೊಂಡು, ಅಕ್ಕಿಯನ್ನು 96ಪೈಸೆಗೆ ಕಿಲೋದಂತೆ ಹೊರ ಮಾರುಕಟ್ಟೆಯಲ್ಲಿ (ಬ್ಲಾಕ್ ಮಾರ್ಕೆಟ್‌ನಲ್ಲಿ) 2 ರೂ. ಕಿಲೋದಂತೆ ಮಾರುವದು. ಈ ಬಿಕ್ಕಟ್ಟಿನ ಲಕ್ಷಣವನ್ನು ಗಮನಿಸಿ. ಆಹಾರ ಧಾನ್ಯ ಸಿಕ್ಕಲಾರದೆಂದೇನಿಲ್ಲ. ಸಾಕಷ್ಟು ಬೆಲೆ ತೆರಬೇಕಾಗುತ್ತದಷ್ಟೇ, ಮತ್ತು ಈ ಬೆಲೆ ವರ್ಷೇ ವರ್ಷೇ ಏರುತ್ತಲೇ ಇದೆ.

ಸುಗ್ಗಿಯ ಮತ್ತು ನಂತರದ ಅವಧಿಯ ಏರುಪೇರು ಬೆಲೆ ನೀತಿಯಷ್ಟೇ ಅಲ್ಲ, ಬೇರೆ ಬೇರೆ ಪ್ರದೇಶಗಳಲ್ಲಿ ಜಿಲ್ಲೆ, ರಾಜ್ಯಗಳಲ್ಲಿ ಒಂದೇ ಅವಧಿಯಲ್ಲಿ ದರಗಳಲ್ಲಿ ಉಂಟಾಗುವ ಅಂತರವೂ. ಅರಾಜಕ ಸ್ಥಿತಿಯ ಸೂಚನೆಯಾಗಿದೆ ಮತ್ತು ಜನರನ್ನು ದಿಕ್ಕೆಡಿಸುತ್ತದೆ.

ಬೂರ್ಷ್ವಾ ಬೆಂಬಲಿಗರು, ಪತ್ರಿಕೆಗಳು ಉತ್ಪಾದನೆಯ ಕೊರತೆಗೆ ಮತ್ತು ಬಿಕ್ಕಟ್ಟಿಗೆ ಜನಸಂಖ್ಯೆಯ ಹೆಚ್ಚಳ, ನಿಸರ್ಗಪ್ರಕೋಪಗಳೇ ಕಾರಣಗಳೆಂದು ಪ್ರಚಾರ ಮಾಡುತ್ತಾರೆ. ಆದರೆ ಇದು ನಿಜವಾದ ಕಾರಣವಲ್ಲ. ಸರಕಾರದ ಅಂಕಿ ಅಂಶಗಳನ್ನೇ ಗಮನಿಸಿದರೆ ಈ 19 ಸ್ವತಂತ್ರ್ಯ ವರ್ಷಗಳಲ್ಲಿ ಜನಸಂಖ್ಯೆಯ ಹೆಚ್ಚಳಕ್ಕಿಂತ, ಆಹಾರದ ಉತ್ಪಾದನೆಯೇ ಹೆಚ್ಚಾಗುತ್ತಿದೆ. ಹಾಗಾದರೆ ಆಹಾರದ ಬಿಕ್ಕಟ್ಟು ಹೆಚ್ಚುತ್ತಿರುವುದೇಕೆ ? ಬೇರೆ ಬೇರೆ ಕಾಲಾವಧಿಗಳಲ್ಲಿ ಬೆಲೆಗಳಲ್ಲಿ ಇಷ್ಟು ಅಂತರವೇಕೆ ? ಇದಕ್ಕೆ ಮುಖ್ಯ ಅಡ್ಡಿ ನಿಸರ್ಗವಲ್ಲ. ಮನುಷ್ಯನ ಶ್ರಮದಿಂದ ಉತ್ಪಾದನೆ ಹೆಚ್ಚಬೇಕಷ್ಟೇ.

ಚೀನದ ಅನುಭವ

ನಮ್ಮ ಕೃಷಿಯೋಗ್ಯಗೊಳಿಸಲ್ಪಟ್ಟ ಭೂಮಿಗಿಂತ ಕಡಿಮೆ ಭೂಮಿ ಹೊಂದಿದ, ಆದರೆ ನಮ್ಮ ಜನಸಂಖ್ಯೆಯ ಒಂದೂವರೆಪಟ್ಟು ಜನಸಂಖ್ಯೆ ಹೆಚ್ಚಿರುವ ಚೀನದಲ್ಲಿ ಸಾಮ್ರಾಜ್ಯಶಾಹಿ ವರದಿಗಾರರೂ ಕೂಡ ಒಪ್ಪುವಂತೆ ಆಹಾರದ ಬಿಕ್ಕಟ್ಟು ಎಳ್ಳಷ್ಟೂ ಇಲ್ಲ. 1966ರಲ್ಲಿಭಾರತದಲ್ಲಿ 7.7ಕೋಟಿ ಟನ್ ಉತ್ಪಾದನೆ ಇದ್ದಾಗ ಚೀನದಲ್ಲಿ 15 ಕೋಟಿ ಟನ್ (ಆಕಾಶವಾಣಿ ವರದಿ ಪ್ರಕಾರ) ಇತ್ತು. ಸಿಲೋನ, ಕ್ಯೂಬ ಪಿಯೆಟ್ನಾಂ ಮುಂತಾದ ರಾಷ್ಟ್ರಗಳಿಗೆ ಚೀನ ಅಕ್ಕಿಯನ್ನು ಕಳಿಸುತ್ತಿತ್ತು.

ಬಿಕ್ಕಟ್ಟಿನ, ಸಮಸ್ಯೆಯ ಮೂಲ ಕಾರಣ ಇರುವುದು ಊಳಿಗ ಮಾನ್ಯ ಭೂ ಸಂಬಂಧಗಳಲ್ಲಿ, ಮತ್ತು ಸರಕಾರ ಅನುಸರಿಸುತ್ತಿರುವ ವರ್ಗ ಧೋರಣೆಯಲ್ಲಿ ಎಂಬುದನ್ನು ಅರಿಯಬೇಕಾಗಿದೆ. ಸಾಮ್ರಾಜ್ಯಶಾಹಿಗಳ ಕ್ರೂರ ಶೋಷಣೆಯಿಂದ ಬರಡಾಗುತ್ತಿರುವ ನಮ್ಮ ಭಾರತದಂಥ ಬಡರಾಷ್ಟ್ರದ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ, ಬೇರೆಯವರ ಮೇಲೆ ಅವಲಂಬಿಸದಂತೆ, ತೀವ್ರ ಪ್ರಗತಿ, ಸಾಧಿಸಬೇಕಾದರೆ ಒಂದೇ ಒಂದು ಮಾರ್ಗವಿದೆ, ಅದು ದೇಶದಲ್ಲಿ ಸಮೃದ್ಧವಾಗಿರುವ ಮಾನವ ಶ್ರಮದ ಮತ್ತು ಹಣಕಾಸು ಮೂಲಗಳ ಸಂಪೂರ್ಣ ಸುಯೋಗ್ಯ ಬಳಕೆ. ದೇಶದ ಆಂತರಿಕ ಭದ್ರತೆ ಸ್ವಾತಂತ್ರ್ಯಕ್ಕೇ ಅಪಾಯ ತರುವ, ಯಾವ ವಿದೇಶಿ ಸಹಾಯವೂ ನಮಗೆ ಕಂಟಕವಾಗಿರುತ್ತದೆ. ಆದರೆ ಭಾರತ ಇದೇ ಸ್ಥಿತಿಯಲ್ಲಿದೆ.

ಉದ್ದಿಮ, ಬ್ಯಾಂಕು ಮುಂತಾದ ಹಣಕಾಸು ಆಕರಗಳನ್ನು ಕೆಲವೇ ವಿದೇಶಿ ಮತ್ತು ಸ್ವದೇಶಿ ಗುತ್ತೇದಾರಿಗಳ ಕೈಗೆ ಸೇರುವಂತೆ ಬಿಡದೇ ದೇಶದ ಸರ್ವಾಂಗೀಣ ಏಳ್ಗೆಗೆ ಅದನ್ನು ಉಪಯೋಗಿಸಬೇಕು. ಮತ್ತೊಂದೆಡೆ ದೇಶದ ಅಸಂಖ್ಯ ದುಡಿಯುವ ವರ್ಗಗಳನ್ನು ಅವರ ಕ್ರಿಯಾಶೀಲ ಶಕ್ತಿಯನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು. ಶ್ರಮವೇ ಸಂಪತ್ತಿನ ಮೂಲ. ಯಂತ್ರವು ಉತ್ಪಾದನೆಯನ್ನು ಹೆಚ್ಚಿಸುವುದು. ಯಂತ್ರವೂ 'ಸತ್ತ ಶ್ರಮವೇ' ಆಗಿರುತ್ತದಷ್ಟೇ. ಯಂತ್ರಗಳಿಂದ ಮಾನವ ಶ್ರಮವಿಲ್ಲದೆ ಉತ್ಪಾದನೆಯೂ ಆಗದು.

ಬೀಜಗಳ ಗುಣಮಟ್ಟ ಹೆಚ್ಚುವುದು, ನೀರಾವರಿ, ರಸಾಯನಿಕ ಗೊಬ್ಬರಗಳ ಯೋಗ್ಯ ಬಳಕೆ ಇವೆಲ್ಲ ಅಗತ್ಯವೇ. ಆದರೆ ಇವೆಲ್ಲ, ಜನತೆ ಜೀವಸತ್ವವಾದ ಶ್ರಮವನ್ನು ಧಾರೆ ಎರೆಯದೇ ಉತ್ಪಾದನೆ ಮಾಡಲಾರೆವು. ಈ ಶ್ರಮಜೀವಿಗಳನ್ನು ಶೋಷಣೆಯ ಚಿತ್ರದಲ್ಲಿ ಸಿಕ್ಕಿಸಿದರೆ ಏನಾಗುತ್ತದೆ ?

ಎಲ್ಲಾ ರೀತಿಯ ಶೋಷಣೆಯನ್ನು ಕಿತ್ತೊಗೆಯಬೇಕಿದೆ. ವಿದೇಶಿ ಸಾಮ್ರಾಜ್ಯಶಾಹಿ, ಸ್ವದೇಶಿ ಗುತ್ತೇದಾರಿ ಬಂಡವಾಳ, ಭೂಮಾಲಿಕರ ಊಳಿಗಮಾನ್ಯ ಶೋಷಣೆ ಇದೆಲ್ಲಕ್ಕೂ ರಾಜ್ಯ ಯಂತ್ರದ ಬಳಕೆ ಇವೆಲ್ಲಕ್ಕೂ, ಕೊನೆ ತರಬೇಕು. ಈ ಕಾರ್ಯಭಾರ ಪೂರೈಸದಿರುವುದರಿಂದಲೇನೆ ದೇಶದ ಜನತೆ ಜೀವನದಲ್ಲಿ ಎಲ್ಲ ರೀತಿ ಬಿಕ್ಕಟ್ಟು ಉಲ್ಬಣಿಸಿದೆ. ಅಂತೆಯೆ ಆಹಾರದ ಬಿಕ್ಕಟ್ಟೂ ಕೂಡ.

ದೇಶದ ಒಟ್ಟು ಜನರಲ್ಲಿ 75% ರಷ್ಟು ಕೃಷಿಕರು ಆಂತೆಯೆ ದೇಶದ ಪ್ರಗತಿಗೆ ತೀವ್ರವಾದ ಕೈಗಾರಿಕೀಕರಣದಷ್ಟೇ ಕೃಷಿಯಲ್ಲಿ ಬದಲಾವಣೆ ತರುವುದು ತುರ್ತಿನ ಅಗತ್ಯ.

ಕೆಲವೇ ಭೂ ಮಾಲಿಕರ ಕೈಲಿ ಭೂಮಿಯ ಕೇಂದ್ರೀಕರಣವಾಗಿರಲಿ, ಬಿಡಲಿ, ಭೂ ಹೀನ ಕೂಲಿಕಾರರಿಗೆ ಭೂಮಿ ಹಂಚಲ್ಪಡಲಿ, ಬಿಡಲಿ; ಬಡವರ ಪರವಾಗಿ ಭೂಸುಧಾರಣೆ ಯೋಗ್ಯವಾಗಿ ಜಾರಿಗೆ ಬರಲಿ ಬರದಿರಲಿ; ಕೃಷಿಯ ಬೆಳವಣಿಗೆಗೆ ಇದೆಲ್ಲ ಮೂಲಭೂತವಾಗಿ ಮುಖ್ಯವಲ್ಲವೆಂದು, ದೇಶದ ಜನತೆಯನ್ನು ನಂಬಿಸಲು ಆಳುವ ಶೋಷಕ ವರ್ಗ ಮತ್ತು ವರ ಸ್ನೇಹಿತರು ಸತತವಾಗಿ ಯತ್ನಿಸುತ್ತಿರುವರು.

ಇವರು 'ಭೂಸುಧಾರಣೆ' ಎಂದರೆ 'ಸಾಮಾಜಿಕ ನ್ಯಾಯ'ವೆಂದು ಹೇಳುವರಲ್ಲದೆ, ಇದು ಉತ್ಪಾದನೆಗೆ ನೇರ ಸಂಬಂಧಿಸಿದ್ದು ಎಂಬುದನ್ನು ಅರಿಯಲಾರರು.

ಭೂ ಸಂಬಂಧವೇನೆ ಇರಲಿ, ಕೃಷಿಯ ಪ್ರಗತಿಯು. ಒಳ್ಳೆ ಬೀಜ, ನೀರಾವರಿ ಸೌಲಭ್ಯ, ಮುಂತಾದವುಗಳ ಮೇಲೆ ಅವಲಂಬಿಸಿದೆ ಎಂದು ಇವರು ಹೇಳುವರು. ಜನರ ಮೂಲಭೂತ ಕಾರ್ಯಭಾರದಿಂದ ಬೇರೆಡೆ ಗಮನ ಸೆಳೆಯಲು ಈ ವರ್ಗ ಈ ಪ್ರಚಾರ ಕೈಕೊಳ್ಳುವರು. ದೇಶಪ್ರೇಮಿ ಜನರನ್ನು ಇಂಥ ಪ್ರಚಾರ ಆಕರ್ಷಿಸುತ್ತಿದೆ. ಇಲ್ಲೇ ಆಳುವ ವರ್ಗದ ಬಲ ಸಾಮರ್ಥ್ಯವೂ ಶ್ರಮಜೀವಿಗಳ ವೈಚಾರಿಕ ಕೊರತೆಯೂ ಕಂಡು ಬರುತ್ತಿದೆ.

ಕೃಷಿಗೆ ಒಳ್ಳೆ ಬೀಜ, ನೀರಾವರಿ, ರಸಾಯನಿಕಗಳ ಅಗತ್ಯವನ್ನು ಅಲ್ಲಗಳೆಯುವಂತಿಲ್ಲ. ಇವುಗಳ ಬಗ್ಗೆ ಬಹಳ ಮಾತನಾಡಿದರೂ ಸರಕಾರ ಇವುಗಳ ಬಗ್ಗೆ ಮಾಡಿದ್ದು ತೀರ ಕಡಿಮೆ.

ಈಗಲೂ 80./. ಕೃಷಿಯೋಗ್ಯ ಜಮೀನು ನೀರಾವರಿ ವ್ಯವಸ್ಥೆಗೆ ಒಳಪಟ್ಟಿಲ್ಲ. ನೀರಾವರಿಯ ಅಲ್ಪ ವ್ಯವಸ್ಥೆಯ ಸಂಪೂರ್ಣ ಪ್ರಯೋಜನವೂ ಆಗಿಲ್ಲ. ರಾಸಾಯನಿಕ ಉತ್ಪಾದನೆ ಬಡವಾಗಿದೆ. ಏರುತ್ತಿರುವ ಬೆಲೆಗಳಿಂದಾಗಿ ಇವನ್ನು ರೈತರಿಗೆ ಕೊಳ್ಳಲಿಕ್ಕೂ ಆಗುತ್ತಿಲ್ಲ. ಅಂತೆಯೆ ನೀರಾವರಿ ವ್ಯವಸ್ಥೆ ಅಭಿವೃದ್ಧಿ, ಕಡಿಮೆ ದರದಲ್ಲಿ ರಾಸಾಯನಿಕ ಗೊಬ್ಬರದ ವ್ಯವಸ್ಥೆ, ಪುಕ್ಕಟ್ಟೆ ಅಥವಾ ಕಡಿಮೆ ದರದಲ್ಲಿ ನೀರಿನ ಸೌಲಭ್ಯ ಒದಗಿಸಬೇಕು ಎಂದಾಗಿ ಪ್ರಜಾಸತ್ತಾತ್ಮಕ ಬೇಡಿಕೆಗಳನ್ನಿಡಬೇಕಾಗುತ್ತದೆ.

ಬರಿ ನೀರಾವರಿ, ಗೊಬ್ಬರಗಳಬಳಕೆ ಮುಂತಾದವುಗಳಿಂದ ಕೃಷಿ ಉತ್ಪಾದನೆ ಹೆಚ್ಚಲು ಸಾಧ್ಯವಿಲ್ಲ. ಇವುಗಳ ಮಹತ್ವವನ್ನು ಅರಿಯುವುದರ ಜೊತೆಗೇನೆ ಮೂಲಭೂತವಾದ ಭೂಸುಧಾರಣೆಯನ್ನು ಬಿಟ್ಟು, ಬರೆ ಊಳಿಗ ಮಾನ್ಯ ಭೂ ವ್ಯವಸ್ಥೆ ಉಳಿಸಿಕೊಂಡು ಹೋದರೆ ಸ್ಪಷ್ಟ ಬೆಳವಣಿಗೆಯನ್ನು ಕಾಣಲು ಸಾಧ್ಯವಿಲ್ಲ. ಕೊಳೆತು ಹೋದ ಭೂ ವ್ಯವಸ್ಥೆಯ ಮೇಲೆ ಯಾವ ಪ್ರಗತಿಯೂ ಅಸಾಧ್ಯ.

ಭೂ ಹಂಚಿಕೆ ಏಕೆ ?

ನಿಸರ್ಗದ ಮೇಲೆ ಹೆಚ್ಚಾಗಿ, ಅವಲಂಬಿಸಬೇಕಾದ ಕೃಷಿಗೆ ಆರೈಕೆ, ರಕ್ಷಣೆ, ಜಾಗರೂಗಕತೆ ಅಗತ್ಯ. ಬೆಳೆಯುತ್ತಿರುವ ಬೀಜಗಳಿಗೆ, ಹಾಲುಣಿಸುವ ತಾಯಿಯಂತೆ ರೈತರ ಆರೈಕೆ ಬೇಕು; ಸಹನೆ ಬೇಕು. ಭೂಮಿಯ ಜತೆ ರೈತರ ಸಂಬಂಧ, ಅವನ ಹಣಕಾಸು ಸಾಮರ್ಥ್ಯ, ಅವನ ಕ್ರಿಯಾಶೀಲತೆಗಳು ಬೆಳೆಯಬೇಕು, ಸರ್ಕಾರದ ಸಹಾಯ ಇದಕ್ಕೆ ಅತ್ಯಗತ್ಯ.

(6ನೇ ಪುಟ ನೋಡಿ)

ಹುಬ್ಬಳ್ಳಿಯಲ್ಲಿ ವಿಶ್ವಶಾಂತಿ ದಿನಾಚರಣೆ

ಡಬ್ಲ್ಯ.ಎಫ್.ಟಿ.ಯು. ಹಾಗೂ ಸಿ. ಐ. ಟಿ. ಯು. ಕೇಂದ್ರದ ಕರೆಯ ಮೇರೆಗೆ ಹುಬ್ಬಳ್ಳಿಯಲ್ಲಿ ಸೆಪ್ಟಂಬರ್ 1 ರಂದು ವಿಶ್ವಶಾಂತಿ ದಿನಾಚರಣೆಯನ್ನು ಯಶಸ್ವಿಯಾಗಿ ಕೈಗೊಳ್ಳಲಾಯಿತು. ಸಿ. ಐ. ಟಿ. ಯು. ನೇತೃತ್ವದ ಜಂಟೀ ಕ್ರಿಯಾಸಮಿತಿಯ ಕರೆಗೆ ಓಗೊಟ್ಟು ಸುಂದತ್ರಾ, ಬಿ ಡಿ ಕೆ ಅಲಾಯ್, ಮೈಸೂರ್ ಕಿರ್ಲೋಸ್ಕರ್, ಕಿರ್ಲೋಸ್ಕರ್ ಇಲೆಕ್ಟ್ರಿಕ್ ಮುಂತಾದ ಹಲವಾರು ಫ್ಯಾಕ್ಟರಿಗಳ ನೂರಾರು ಕಾರ್ಮಿಕರು ಅಂದು ಸಂಜೆ ನಡೆದ ಮೆರವಣಿಗೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು. "ಯುದ್ಧ ಬೇಡ, ಶಾಂತಿಬೇಕು", "ಯುದ್ಧ ಖೋರ ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ ಧಿಕ್ಕಾರ" "ಪಾಕಿಸ್ತಾನದ ಸರ್ವಾಧಿಕಾರಿ ಝಿಯಾಗೆ ಅಮೇರಿಕದಿಂದ ಶಸ್ತ್ರಾಸ್ತ್ರ ಪೂರೈಕೆ ನಿಲ್ಲಲಿ" ಮುಂತಾದ ಘೋಷಣೆಗಳನ್ನು ಕೂಗುತ್ತ ಕಾರ್ಮಿಕರು ನಗರದ ಪ್ರಮುಖ ಬೀದಿಗಳಲ್ಲೆಲ್ಲ ಹಾದು ಕೊನೆಗೆ ಈದಗಾ ಮೈದಾನದಲ್ಲಿ ಬಹಿರಂಗ ಸಭೆಗಾಗಿ ಸೇರಿದ್ದರು. ಅಷ್ಟು ಹೊತ್ತಿಗೆ ನಾಗರಿಕರೂ ದೊಡ್ಡ ಸಂಖ್ಯೆಯಲ್ಲಿ ಸಭೆಯಲ್ಲಿ ಪಾಲ್ಗೊಳ್ಳಲು ಬಂದಿದ್ದರು. ಮುಖ್ಯ ಭಾಷಣಕಾರರಾಗಿದ್ದ ಕರ್ನಾಟಕ ರಾಜ್ಯ ಸಿ.ಐ.ಟಿಯು ಕಾರ್ಯದರ್ಶಿ ಕಾ। ವಿ. ಜೆ. ಕೆ. ನಾಯರ್ ಅವರು ಯುದ್ಧಗಳ ಹುಟ್ಟು ಹಾಗೂ ಬೆಳವಣಿಗೆಯ ಕಾರಣಗಳನ್ನು ಕಾರ್ಮಿಕರಿಗೆ ತಿಳಿಯುವ ಶೈಲಿಯಲ್ಲಿ ವಿವರಿಸಿ ಆಧುನಿಕ ಯುಗದಲ್ಲಿ ಸಾಮ್ರಾಜ್ಯಶಾಹಿ ವ್ಯವಸ್ಥೆ ಮತ್ತು ಯುದ್ಧಗಳ ನಡುವಿನ ಅನ್ಯೋನ್ಯ ಸಂಬಂಧವನ್ನು ಬಣ್ಣಿಸಿದರು. ಅಗ್ಗದ ದರದಲ್ಲಿ ಕಚ್ಚಾ ಮಾಲುಗಳ ಸಂಪಾದನೆ ಹಾಗೂ ತಯಾರಿತ ವಸ್ತುಗಳನ್ನು ಆದಷ್ಟು ಹೆಚ್ಚು ಲಾಭದರದಲ್ಲಿ ಮಾರುವುದಕ್ಕಾಗಿ ಸಾಮ್ರಾಜ್ಯಶಾಹಿ ದೇಶಗಳ ನಡುವಿನ ನಾಯಿ-ಕಚ್ಚಾಟದಿಂದಾಗಿಯೇ ಜಗತ್ತು ಎರಡು ಮಹಾಯುದ್ಧಗಳು ಹಾಗೂ ಅವುಗಳಿಂದುಂಟಾದ ಅವರ್ಣನೀಯ ಸಾವು ನೋವು ಹಾಗೂ ಆಸ್ತಿಪಾಸ್ತಿಹಾನಿಯ ದುರಂತ ಅನುಭವಿಸಿತೆಂದು ಅವರು ಹೇಳಿದರು. ಇಂದು ಜಗತ್ತಿನ ಒಂದು ಮೂರಾಂಶ ಭಾಗವು ಸಮಾಜವಾದಿ ವ್ಯವಸ್ಥೆಯನ್ನು ಒಪ್ಪಿಕೊಂಡು ಇತರೇ ಜನಸಮುದಾಯಕ್ಕೆ ಮಾದರಿ ಹಾಕಿಕೊಟ್ಟಿರುವಾಗಲೇ ಹಾಗೂ ಜಗತ್ತಿನಾದ್ಯಂತ ಸ್ವಾತಂತ್ರ್ಯ ಪ್ರಜಾಪ್ರಭುತ್ವ ಪ್ರಗತಿ ಹಾಗೂ ಶಾಂತಿಗಳಿಗಾಗಿ ಹೋರಾಟ ವ್ಯಾಪಕಗೊಳ್ಳುತ್ತಿರುವಾಗಲೇ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಅಣ್ವಸ್ತ್ರ ಯುದ್ಧದ ತಯಾರಿ ನಡೆಸುತ್ತಿರುವದು ಅತ್ಯಂತ ಗಮನಾರ್ಹ. ಆದ್ದರಿಂದ ಕಾರ್ಮಿಕ ವರ್ಗವೇ ಮುಂಚೂಣಿಯಲ್ಲಿ ನಿಂತು ಜಗದ್ವ್ಯಾಪಿ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ಮೂಲಕ ಅದನ್ನು ನಿರ್ಮೂಲನಗೊಳಿಸದೇ ಮಾನವ ಕುಲಕ್ಕೆ ಉಳಿವಿಲ್ಲ ಎಂದವರು ಹೇಳಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾ॥ ಸುಧೀಂದ್ರ ಅವರು ನಮ್ಮ ದೇಶದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ದೀರ್ಘ ಪರಂಪರೆಯಿದ್ದರೂ ಕೂಡ ಯುದ್ಧ ವಿರೋಧಿ ವಾತಾವರಣ ತೀವ್ರವಾಗಿ ಬೆಳೆದು ಬರದೇ ಇರುವುದು ಕಳವಳಕಾರಕ ಎಂದು ತಿಳಿಸಿ ಇದಕ್ಕೆ ಕೆಲ ಚಾರಿತ್ರಿಕ ಕಾರಣಗಳಲ್ಲದೇ ಅಮೇರಿಕ ಹಾಗೂ ಸೋವಿಯಟ್ ಯೂನಿಯನ್ನುಗಳನ್ನು ಒಂದೇ ತಕ್ಕಡಿಯಲ್ಲಿ ತೂಗುವ ಕಲ್ಪಿತ ಬಲಪಂಥೀಯ ರಾಜಕೀಯ ಪ್ರಚಾರವೂ ಕಾರಣವೆಂದು ಹೇಳಿದರು. ಸೋವಿಯಟ್ ಯೂನಿಯನ್ನಿನ ಶಾಂತಿ ಪರ ನಿಲುವನ್ನು ವಿವರಿಸಿದ ಅವರು ಸೋವಿಯಟ್ ಯೂನಿಯನ್ ಯುದ್ಧಖೋರ ಅಮೇರಿಕಕ್ಕೆ ಮಿಲಿಟರಿ ಶ್ರೇಷ್ಠತೆಯನ್ನು ಪಡೆಯಲು ಅವಕಾಶ ಕೊಡಲು ಸಾಧ್ಯವಿಲ್ಲೆಂಬುದನ್ನು ತಿಳಿಸಿದರು. ಜಗತ್ತಿನಾದ್ಯಂತ ಇತ್ತೀಚಿನ ವರ್ಷಗಳಲ್ಲಿ ವ್ಯಾಪಕವಾಗಿ ಬೆಳೆದುಬಂದಿರುವ ಶಾಂತಿ ಚಳುವಳಿಯಲ್ಲಿ ಈಗ ಭಾರತೀಯ ಜನತೆಯೂ ಕೂಡ ಹೋದ ವರ್ಷ ಅಕ್ಟೋಬರ 4ರ ಶಾಂತಿಯಾತ್ರೆಯ ಮೂಲಕ ಕಾಲಿಟ್ಟಿದ್ದು, ಈ ಹೋರಾಟದಲ್ಲಿ ಇಡೀ ಕಾರ್ಮಿಕ ಹಾಗೂ ಜನಸಮುದಾಯ ಪಾಲ್ಗೊಳ್ಳುವಂತೆ ಮಾಡಲು ಟ್ರೇಡ್ ಯೂನಿಯನ್ನುಗಳು ಶ್ರಮಿಸಬೇಕಾಗಿದೆ ಎಂದವರು ಹೇಳಿದರು. ಸಭೆಯಲ್ಲಿ ಕಾ। ಜಿ.ಎ. ಹಿರೇಮಠ, ಕಾ। ಜಯಣ್ಣ ಅವರೂ ಮಾತನಾಡಿದರು. ಕಾ। ವಿ. ಎಂ. ಪೂಜಾರ ಅವರು ವಂದನಾರ್ಪಣೆ ಮಾಡಿದ ನಂತರ ಘೋಷಣೆಗಳೊಂದಿಗೆ ಸಭೆ ಮುಕ್ತಾಯಗೊಂಡಿತು.

ರೈತಸಂಘ ಸ್ಥಾಪನೆ

ಉಡುಪಿ ತಾಲ್ಲೂಕ್ ಸಾಲಿಗ್ರಾಮ ಪುರಸಭೆ ವ್ಯಾಪ್ತಿಯಲ್ಲಿರುವ ಗುಂಡ್ಮಿ ಗ್ರಾಮದ ರೈತ ಕೃಷಿ ಕೂಲಿಗಾರರ ವಿಸ್ತೃತ ಸಭೆಯು ದಿನಾಂಕ 8-9-83 ರಂದು ಜರುಗಿತು. ಕುಂದಾಪುರ ತಾಲ್ಲೂಕ್ ರೈತ ಸಂಘದ ಜೊತೆ ಕಾರ್ಯದರ್ಶಿ ಕಾ॥ ವೆಂಕಟೇಶ ಕೋಣಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕುಂದಾಪುರದ ಡಿ. ವೈ. ಎಫ್. ಐ. ಮುಖಂಡ ಕಾ॥ ಮಹಾಬಲ ಮತ್ತು ನರಸಿಂಹ ಅವರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಭೆಯ ಪ್ರಾರಂಭದಲ್ಲಿ ಶ್ರೀ ವಿಷ್ಣುಮೂರ್ತಿಯವರು ಸ್ವಾಗತಿಸಿದರು. ರೈತ ಸಂಘದ ಉದ್ದೇಶ, ಕಾರ್ಯಕ್ರಮಗಳ ಬಗ್ಗೆ ಕಾ। ವೆಂಕಟೇಶ ಕೋಣಿಯವರು ಸಭೆಗೆ ವಿವರಿಸಿದರು. ರೈತ ಕೃಷಿ ಕೂಲಿಗಾರರನ್ನು ಸಂಘಟಿಸಿ ಬಲಿಷ್ಠ ಹೋರಾಟ ಬೆಳೆಸಬೇಕೆಂದು ಕಾ। ಮಹಾಬಲರವರು ಕರೆ ಇತ್ತರು.

, ದಿನಾಂಕ 30-9-83 ರಂದು ದ. ಕ. ಜಿಲ್ಲೆಯಾದ್ಯಂತ ನಡೆಯುವ ರೈತರ ಧರಣಿ ಸತ್ಯಾಗ್ರಹವನ್ನು ಯಶಸ್ವಿಗೊಳಿಸಲು ಮತ್ತು ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸುವ ನಿರ್ಣಯವನ್ನು ಸಭೆಯಲ್ಲಿ ಕೈಕೊಳ್ಳಲಾಯಿತು.

ಶ್ರೀ ನಾರಾಯಣ ಮತ್ತು ಬಸವನವರ ಸಂಚಾಲಕತ್ವದ ಹನ್ನೆರಡು ಮಂದಿಯ ತಾತ್ಕಾಲಿಕ ಸಮಿತಿಯೊಂದನ್ನು ಆಯ್ಕೆ ಮಾಡಲಾಯಿತು.

ಉಡುಪಿ

ಕ್ಯಾಪಿಟೇಶನ್ ಶುಲ್ಕದ ವಿರುದ್ಧ ಪ್ರತಿಭಟನೆ

"ಶಾಲಾ ಕಾಲೇಜುಗಳಲ್ಲಿ ಡೊನೇಶನ್ ಶುಲ್ಕ ರದ್ದಾಗಬೇಕು : ಕ್ಯಾಪಿಟೇಶನ್ ಶುಲ್ಕದ ಪಿಡುಗು ಸಂಪೂರ್ಣ ನಿವಾರಣೆಯಾಗಬೇಕು. ವ್ಯಾಪಾರಿ ಕೇಂದ್ರಗಳಾದ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ರಾಷ್ಟ್ರೀಕರಿಸಬೇಕು." ಎಂಬ ಘೋಷಣೆಗಳೊಡನೆ ದಿನಾಂಕ 1-9-83 ರಂದು ವಿದ್ಯಾರ್ಥಿಗಳು ಉಡುಪಿಯ ತಾಲ್ಲೂಕು ಕಚೇರಿ ಎದುರು ಮೌನ ಪ್ರದರ್ಶನ ನಡೆಸಿದರು. ಭಾರತ ವಿದ್ಯಾರ್ಥಿ ಫೆಡರೇಶನ್ (S F.I.)ನ ಕರ್ನಾಟಕ ರಾಜ್ಯ ಸಮಿತಿಯ ಕರೆಯಂತೆ ನಡೆದ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ, ರಾಜ್ಯದಲ್ಲಿ ಜನತಾ ಸರಕಾರ ಅಧಿಕಾರದತ್ತ ಬರುವುದರಲ್ಲಿ ಮಹತ್ತರ ಪಾತ್ರ ವಹಿಸಿದ್ದ ವಿದ್ಯಾರ್ಥಿ ಸಮುದಾಯದ ಬೆನ್ನಲ್ಲಿ ಇರಿದ ಸರಕಾರದ ಕ್ರಮದ ವಿರುದ್ಧ ಒಕ್ಕೊರಲ ದನಿ ಎಬ್ಬಿಸಿದರು.

ಯಶಸ್ವಿಯಾಗಿ ನಡೆದ ಈ ಕಾರ್ಯಕ್ರಮ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರು ಎದುರಿಸುತ್ತಿರುವ ಸಮಸ್ಯೆಗಳ ಕಡೆಗೆ ಸಾರ್ವಜನಿಕರ ಗಮನ ಸೆಳೆಯುವುದರಲ್ಲಿ ಶಕ್ತವಾಯಿತು.

ಹೂವಿನಹಡಗಲಿ ತಾಲ್ಲೂಕು

ರೈತ ಸಂಘದ ಸಭೆಗಳು

ದಾಸನ ಹಳ್ಳಿ

ದಿನಾಂಕ 24-8-83 ಹೂವಿನ ಹಡಗಲಿ ತಾಲ್ಲೂಕು ದಾಸನಹಳ್ಳಿ ಗ್ರಾಮದಲ್ಲಿ ಪ್ರಾಂತ ರೈತ ಸಂಘದ ಸಭೆಯನ್ನು ನಡೆಸಲಾಯಿತು. ಗ್ರಾಮದ ಮುಖ್ಯಸ್ಥರಾದ ಪಿ. ಎಂ. ಶಿವಯ್ಯನವರು ಸ್ವಾಗತವನ್ನು ಕೋರಿದರು ಪ್ರಾಂತ ರೈತ ಸಂಘದ ಕಾರ್ಯಕರ್ತ ಹಾಗೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ತಾಲ್ಲೂಕ್ ಕಾರ್ಯದರ್ಶಿ ಕಾ। ಪಿ. ಆರ್. ವೆಂಕಟೇಶ್ ಮಾತನಾಡಿದರು. ಸಭೆಯ ನಂತರ ಸಮಿತಿಯೊಂದನ್ನು ರಚಿಸಲಾಯಿತು. ಪದಾಧಿಕಾರಿಗಳು ಇಂತಿದ್ದಾರೆ.

ಅಧ್ಯಕ್ಷರು, ಚನ್ನಬಸಪ್ಪ ಉಪಾಧ್ಯಕ್ಷ, ಶಂಕ್ರಣ್ಣ ಸೊಪ್ಪಿನ ಕಾರ್ಯದರ್ಶಿ ಶಿವಪುತ್ರಪ್ಪ ಉಪ ಕಾರ್ಯದರ್ಶಿ, ಇಟಿಗಿ ಮಂಜಣ್ಣ

ಅಲ್ಲದೆ 10 ಜನರ ಕಮಿಟಿಯೊಂದನ್ನು ರಚಿಸಲಾಯಿತು.

ಕಳಸಾಪುರ

ದಿನಾಂಕ 25-8-1983 ರಂದು ಹಡಗಲಿ ತಾಲ್ಲೂಕಿನ ಕಳಸಾಪುರ ಗ್ರಾಮದಲ್ಲಿ ಪ್ರಾಂತ ರೈತ ಸಂಘದ ಆಶ್ರಯದಲ್ಲಿ ಸಭೆಯನ್ನು ನಡೆಸಲಾಯಿತು. ಸಭೆಯನ್ನುದ್ದೇಶಿಸಿ, ಕಾ॥ ಪಿ. ಆರ್. ವೆಂಕಟೇಶ್ ಮಾತನಾಡಿದರು. ಸಭೆಯ ನಂತರ ಘಟಕ ಸ್ಥಾಪಿಸಲಾಯಿತು. ಬೂದಿ ಹನುಮಂತಪ್ಪ (ಅಧ್ಯಕ್ಷರು), ಬಣಕಾರ ಬಸವರಾಜಪ್ಪ (ಉಪಾಧ್ಯಕ್ಷ), ಬಿ. ಹಾಲಪ್ಪ (ಕಾರ್ಯದರ್ಶಿ), ಅಂಗಡಿ ನಾಗಪ್ಪ (ಸಹ ಕಾರ್ಯದರ್ಶಿ) ಘಟಕದ ಪದಾಧಿಕಾರಿಗಳಾಗಿ ಆಯ್ಕೆಯಾಗಿದ್ದಾರೆ.

ಅಲ್ಲದೆ ಹತ್ತು ಜನರ ಕಮಿಟಿಯೊಂದನ್ನು ರಚಿಸಲಾಯಿತು.

ಬಸರಳ್ಳಿ ತಾಂಡ

ದಿನಾಂಕ 27-8-83 ರಂದು ಬಸರಳ್ಳಿ ತಾಂಡದಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಸಭೆಯನ್ನುದ್ದೇಶಿಸಿ ಕಾ। ಪಿ. ಆರ್. ವೆಂಕಟೇಶ್ ಮಾತನಾಡಿದರು. ಸದಸ್ಯತ್ವವನ್ನು ಮಾಡಿಸಲಾಯಿತು. ಸುತ್ತಮುತ್ತಲ ತಾಂಡಗಳಿಗೂ ಭೇಟಿ ಕೊಡಬೇಕೆಂದು ಗ್ರಾಮದ ಜನತೆ ಪ್ರಾಂತ ರೈತ ಸಂಘಕ್ಕೆ ಮನವಿ ಮಾಡಿಕೊಂಡರು. ಅಲ್ಲದೆ ಈ ಹಳ್ಳಿಯ ಸುತ್ತಮುತ್ತಲ ಹಳ್ಳಿಗಳಿಗೆ ಭೇಟಿ ನೀಡಿ ಐದು ಹಳ್ಳಿಗಳ ಸಮಸ್ಯೆಗಳನ್ನು ಒಟ್ಟುಗೂಡಿಸಿ ಹೋರಾಟ ಮಾಡುವುದಾಗಿ ಹಳ್ಳಿಯ ಹಿರಿಯರು ತೀರ್ಮಾನಿಸಿದರು.

ಕೊಮಾರ್ನಹಳ್ಳಿ ತಾಂಡ

ದಿನಾಂಕ 1-9-1983 ರಂದು ಕೊಮಾರ್ನಹಳ್ಳಿ ತಾಂಡದಲ್ಲಿ ರೈತ ಸಂಘದ ಸಭೆಯು ಜರುಗಿತು. ಮೊದಲಿಗೆ ಗ್ರಾಮ ಘಟಕದ ಅಧ್ಯಕ್ಷ ಕಾ। ಆರ್. ಪುರ್ವಾ ನಾಯ್ಕರವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. "ಪ್ರಾಂತ ರೈತ ಸಂಘವು ನಮ್ಮ ಹಳ್ಳಿಯಲ್ಲಿ ಪ್ರಾರಂಭವಾಗಿ ಒಂದು ವರುಷವಾಯಿತು. ಇದುವರೆಗೂ ನಮ್ಮ ಹಳ್ಳಿಯನ್ನು ಬಾಧಿಸುತ್ತಿರುವ ತೀವ್ರ ಸಮಸ್ಯೆಗಳ ಪರಿಹಾರಕ್ಕಾಗಿ ಸುದೀರ್ಘ ಹೋರಾಟವನ್ನು ಮಾಡುತ್ತಾ ಬಂದರೂ ಎಲ್ಲ ಸಮಸ್ಯೆಗಳು ಬಗೆಹರಿಯಲಿಲ್ಲ. ಇದಕ್ಕಾಗಿ ಇನ್ನೂ ಶಿಸ್ತು ಬದ್ಧ ಹಾಗೂ ಉಗ್ರ ಹೋರಾಟ ಅನಿವಾರ್ಯವಾಗಿದೆ" ಎಂದು ಹೇಳಿದರು. ನಂತರ ದಿ. 5-9-83 ರಂದು ಭೂ ಹೀನರ ಸಮಾವೇಶವನ್ನು ಕರೆಯುವುದಾಗಿ ಗ್ರಾಮ ಘಟಕದ ಸಮಿತಿ ತೀರ್ಮಾನಿಸಿದೆ.

ಕಲಕುಟಗಿ

ರೈತಸಂಘ ರಚನೆ

ದಿನಾಂಕ 29-8-83 ರಂದು ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಕಲಕುಟಗಿ ಗ್ರಾಮದಲ್ಲಿ ರೈತರ ಸಭೆ ನಡೆದು ಕರ್ನಾಟಕ ಪ್ರಾಂತ ರೈತ ಸಂಘ ಕಲಕುಟಗಿ ಘಟಕವನ್ನು ರಚಿಸಲಾಯಿತು. ಸಭೆಯಲ್ಲಿ ಕಾ। ಯಶ್ವಂತ ಹದಸೂಡ ಅವರು ಉಪಸ್ಥಿತರಿದ್ದರು. ಸಂಘದ ಧ್ಯೇಯ ಉದ್ದೇಶಗಳ ಬಗ್ಗೆ ಚರ್ಚೆ ನಡೆಯಿತು.

ಅಧ್ಯಕ್ಷರಾಗಿ ಕಾ। ಹನುಮಂತರಾಯ ಬಿರದಾರ ಉಪಾಧ್ಯಕ್ಷರಾಗಿ ರೇವಣಸಿದ್ದಪ್ಪ ಬಿರದರಾದ, ಮಹಿಬೂಬಸಾಬ, ಕಾರ್ಯದರ್ಶಿಯಾಗಿ ನಾಗಪ್ಪಕಾಳಗಿ, ಸಹಕಾರ್ಯದರ್ಶಿಯಾಗಿ ನೀಲಕಂಠಪ್ಪ ಬಿರದಾರ, ಬಸವರಾಜ ಗೋಳೆ ಮತ್ತು ಖಜಾಂಚಿಯಾಗಿ ಕಲ್ಯಾಣಪ್ಪ ಗೋಳಿ ಅವರು ಆಯ್ಕೆಯಾದರು ಸಭೆಯಲ್ಲಿ ಸುಮಾರು ಇನ್ನೂರು ಜನ ರೈತರು ಭಾಗವಹಿಸಿದ್ದರು.

ನಿರುದ್ಯೋಗಿಗಳಿಗೆ ಕರ್ನಾಟಕ ಆಗ್ರೋ ಪ್ರಾಡಕ್ಟ್ಸ್ ಲಿ.ನ ಮೋಸ

ಡಿ.ವೈ.ಎಫ್.ಐ. ನಿಂದ ವ್ಯಾಪಕ ಪ್ರತಿಭಟನೆ

ಈ ಹಿಂದೆ, ಅಂದರೆ ಇದೇ ವರ್ಷ ಫೆಬ್ರುವರಿ ಮತ್ತು ಮಾರ್ಚ್ ತಿಂಗಳಲ್ಲಿ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ ನೇಮಕಾತಿಯಲ್ಲಿ ನಡೆಯುತ್ತಿದ್ದ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ ಮತ್ತು ಅಮಾನವೀಯ ಕಂಟ್ರಾಕ್ಟ್ ಲೇಬರ್ ಪದ್ಧತಿ ಮುಂತಾದವುಗಳನ್ನು ಪ್ರತಿಭಟಿಸಿ, ಡಿ. ವೈ. ಎಫ್. ಐ. ಯು ದೊಡ್ಡ ಹೋರಾಟವನ್ನೇ ಮಾಡಿ, ಒಂದು ಹಂತದ ಸಾಫಲ್ಯವನ್ನು ಯುವಜನರಿಗೆ ಅದು ದೊರಕಿಸಿಕೊಟ್ಟಿತು. ಈಗ ರಾಯಚೂರು ಡಿ. ವೈ. ಎಫ್. ಐ. ಘಟಕವು ಕರ್ನಾಟಕ ಆಗ್ರೋ ಕಾರ್ನ್ ಪ್ರಾಡಕ್ಟ್ಸ್‌ನ, ಆಡಳಿತ ವರ್ಗದ ಅನ್ಯಾಯವನ್ನು ಪ್ರತಿಭಟಿಸಿ ವ್ಯಾಪಕ ಹೋರಾಟಕ್ಕೆ ಅಣಿಯಾಗಿದೆ.

ಕರ್ನಾಟಕ ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ಲಿ.ನಲ್ಲಿ ಜುಲೈ 25ರಿಂದ 28ರ ವರೆಗೆ ಸುಮಾರು ಸಾವಿರ ಜನರ ಸಂದರ್ಶನ. ಖಾಲಿ ಇರುವ 115 ಹುದ್ದೆಗಳಿಗೆ ನಡೆಯಿತು. ಈ ಸಂದರ್ಶನಕ್ಕೆ ಜಿಲ್ಲೆಯ ಬೇರೆ ಊರುಗಳಿಂದ ಅಭ್ಯರ್ಥಿಗಳು ಬಂದಿದ್ದರು. ಆದರೆ ಇತ್ತೀಚೆಗೆ ಆಡಳಿತವರ್ಗವು ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ರದ್ದುಪಡಿಸಿ. ಆಗ್ರೋ ಇಂಡಸ್ಟ್ರಿಯಲ್ಲಿ ಹೆಚ್ಚುವರಿಯಾಗಿದ್ದಾರೆಂದು ಹೇಳಲಾದ ನೌಕರರನ್ನು ಬಲವಂತವಾಗಿ ಆಗ್ರೋ ಕಾರ್ನ್ ಘಟಕದಲ್ಲಿ ತುರುಕುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ನೂರಾರು ಯುವಕರು ಡಿ.ವೈ.ಎಫ್.ಐ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯ ಮಂತ್ರಿಗಳಿಗೆ ಮನವಿ ಅರ್ಪಿಸಿದರು. ಮನವಿಯಲ್ಲಿ. ಸಧ್ಯ ಸಂದರ್ಶನ ಕೊಟ್ಟ ಅಭ್ಯರ್ಥಿಗಳನ್ನು ಖಾಲಿ ಇದ್ದ ಹುದ್ದೆಗಳಿಗೆ ಭರ್ತಿಮಾಡಿಕೊಳ್ಳಬೇಕು. ಆಗ್ರೋ ಇಂಡಸ್ಟ್ರಿಯಲ್ಲಿಯ ನೌಕರರನ್ನು ಅಲ್ಲಿಯೇ ಖಾಯಂ ಮಾಡಬೇಕು ಎಂದು ಒತ್ತಾಯಿಸಿದರು.

ಶಾಸನಸಭೆಯಲ್ಲಿ ಕೇಳಿದ್ದು - ಕಂಡದ್ದು

-ಎನ್. ಕೆ. ಉಪಾಧ್ಯಾಯ

ಸಾರಿಗೆ ಸಂಸ್ಥೆಗೆ ಹಾನಿ

ನಗರ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಸಾರ್ವಜನಿಕ ಮತ್ತು ಖಾಸಗಿ ಕಾರ್ಖಾನೆಗಳ ಸಿಬ್ಬಂದಿ ಸಾಗಿಸಲು ಕೊಟ್ಟಿರುವುದರಿಂದ ಸಾರಿಗೆ ಸಂಸ್ಥೆಗೆ 1.50ಕೋಟಿ ರೂ. ಆದಾಯ ಬರುತ್ತಿದೆಯಂತೆ. ಆದರೆ ಈ ವರ್ಷದ ಮೊದಲ ಆರು ತಿಂಗಳಲ್ಲಿ ಸರಕಾರವೇ ನಡೆಸುತ್ತಿರುವ ರಾಜ್ಯಸಾರಿಗೆ ಸಂಸ್ಥೆ 634ಲಕ್ಷ ರೂ. ನಷ್ಟ ಅನುಭವಿಸಿದೆಯಂತೆ. ಹೋದ ವರ್ಷ ರೂ. 15-20 ಕೋಟಿಗೂ ಹೆಚ್ಚು ಹಾನಿಯಾಗಿದೆ ಎಂಬ ಸಂಗತಿ ಪತ್ರಿಕೆಗಳಲ್ಲಿ ಓದಿದ್ದೇವೆ. ಡೀಸೆಲ್, ಟಯರ್, ಟ್ಯೂಬ್, ಬಿಡಿ ಭಾಗಗಳ ಬೆಲೆಯೇರಿಕೆಯಿಂದಾಗಿ ನಷ್ಟಉಂಟಾಗುತ್ತಿದೆಂದು ಸಾರಿಗೆ ಮಂತ್ರಿ ಎಂ. ಪಿ. ಪ್ರಕಾಶ ಅವರು ವಿಧಾನಸಭೆಯಲ್ಲಿ ಹೇಳಿದ್ದಾರೆ. ಖಾಸಗಿ ಬಸ್ ಮಾಲಿಕರೆಲ್ಲ ಸಾರಿಗೆ ಸಂಸ್ಥೆಯಂತೆಯೇ ಬೆಲೆಯೇರಿಕೆಯ ಪೆಡಂಭೂತದಿಂದ ಪರಿಹಾರ ಕಂಡಿಲ್ಲೆಂಬ ಸಂಗತಿ ಎಲ್ಲರಿಗೂ ಗೊತ್ತು. ಖಾಸಗಿ ಬಸ್‌ಮಾಲಿಕರು ತಾವು ಗಳಿಸುತ್ತಿರುವ ಲಾಭದಿಂದ ಪ್ರತಿ ವರ್ಷ ಒಂದಕ್ಕೆರಡು. ಎರಡಕ್ಕೆ ನಾಲ್ಕು, ಹೀಗೆ ಹೊಸ ಬಸ್ಸುಗಳನ್ನು ಖರೀದಿಸಿ ಲಗ್ಜರಿಬಸ್ಸುಗಳನ್ನು ಓಡಾಡಿಸುತ್ತಿರುವುದರ ಒಳಗುಟ್ಟೇನು ? ಖಾಸಗೀ ಮಾಲಿಕರಾದರೆ ಹಾನಿ ಎಂಬ ಶಬ್ದವನ್ನೇ ಕೇಳುವುದಿಲ್ಲವಲ್ಲ. ರಾಷ್ಟ್ರೀಕೃತ ಸಾರಿಗೆ ಸಂಸ್ಥೆಗಳಿಗಷ್ಟೇ ಈ ಗತಿಯೇ ಖಾಸಗೀ ಸಂಸ್ಥೆಯಲ್ಲಿ ಸೋರಿ ಹೋಗಲು ಮಾಲಕರ ತೂತೊಂದೇ ಆಗಿದ್ದರೆ, ಸರಕಾರಿ ಸಾರಿಗೆ ಸಂಸ್ಥೆಯಲ್ಲಿ ಎಣಿಕೆಯಿಲ್ಲದಷ್ಟು ಸೋರಿ ಹೋಗುವ ತೂತುಗಳಿವೆಂಬುದನ್ನು ಇದು ತೋರ್ಪಡಿಸುವುದಿಲ್ಲವೇ. ಇದಕ್ಕೆ ಪ್ರಕಾಶ್ ಅವರಿಂದ ಉತ್ತರ ನಿರೀಕ್ಷಿಸಲೇ ?

ಗ್ರಾಮೀಣ ಸಾರಿಗೆ ವ್ಯವಸ್ಥೆ

ಸರಕಾರಿ ಸಾರಿಗೆ ಸಂಸ್ಥೆಯ ಆದಾಯವೆಲ್ಲ ನೂರಾರು ತೂತುಗಳ ಮೂಲಕ ಸೋರುತ್ತಿರುವಾಗಲೇ ರಾಜ್ಯದ ಗ್ರಾಮೀಣ ಪ್ರದೇಶಕ್ಕೆ ಸಾರಿಗೆ ವ್ಯವಸ್ಥೆ ಒದಗಿಸಬೇಕೆಂಬ ಬೇಡಿಕೆಯ ಒತ್ತಡ ಹೆಚ್ಚಾಗುತ್ತಿದೆ. ಆ ಬೇಡಿಕೆ ಪೂರೈಸುವ ಕಾರ್ಯಕ್ರಮವನ್ನು ರಾಜ್ಯ ಸರಕಾರ ಹಮ್ಮಿಕೊಳ್ಳುವ ದೀರ್ಘಾಲೋಚನೆಯಲ್ಲಿದೆ.

ವ್ಯವಸಾಯ ಪ್ರಧಾನವಾದ ನಮ್ಮ ದೇಶದಲ್ಲಿ ಹಾಗೆಯೇ ರಾಜ್ಯದಲ್ಲಿ ಹಳ್ಳಿಯೇ ನಮ್ಮ ಅರ್ಥ ವ್ಯವಸ್ಥೆಯ ಜೀವಾಳವಾಗಿರುತ್ತದೆ. ಹಳ್ಳಿಯಲ್ಲಿ ಬೆಳೆದ ವಸ್ತುಗಳು ಪೇಟೆ ಸೇರಬೇಕು. ಅಲ್ಲಿಯ ಜನ ದಿನನಿತ್ಯದ ಕೆಲಸ ಕಾರ್ಯಗಳಿಗಾಗಿ ನಗರಕ್ಕೆ ಬರಬೇಕು. ಮತ್ತೆ ತಮ್ಮ ಗ್ರಾಮ ಸೇರಬೇಕು. ಆಧುನಿಕ ಯುಗದಲ್ಲಿ ಹಳ್ಳಿ-ಪೇಟೆಗಳಿಗೆ ನಿಕಟ ಸಂಬಂಧ ಬೆಳೆದು ಬಂದಿದೆ. ಈ ಸಂಬಂಧದಲ್ಲಿ ಸೆಕೆಂಡು ತಡವಾದರೆ ಜನಜೀವನವೇ ಅಲ್ಲೋಲಕಲ್ಲೋಲವಾಗುತ್ತಿರುವುದನ್ನು ನೋಡುತ್ತಿದ್ದೇವೆ.

ಮನುಷ್ಯನ ಶರೀರದಲ್ಲಿ ರಕ್ತ ಹರಿದಾಡುತ್ತಿರುವಂತೆ ಪಟ್ಟಣ-ಹಳ್ಳಿಗಳೊಳಗೆ ವಾಹನ ಸಂಚಾರ ಅತ್ಯಗತ್ಯ. ಈ ಹಿಂದೆ ಚಕ್ಕಡಿಗಾಡಿ. ಸೈಕಲ್ಲು ಕಾಲ್ನಡಿಗೆಯೇ ಸಂಪರ್ಕ ಸಾಧನೆಯಾಗಿತ್ತು. ಈಗ ವಾಹನಗಳು ಪ್ರಧಾನ ಪಾತ್ರ ವಹಿಸುತ್ತಿವೆ. ಸ್ವಾತಂತ್ರ್ಯ ಪಡೆದ 37 ವರ್ಷಗಳಲ್ಲಿ ಈ ದಿಸೆಯಲ್ಲಿ ಹೇಳಿಕೊಳ್ಳುವಂಥ ಪ್ರಗತಿಯಾಗಿರುವುದಿಲ್ಲ. ಹಳ್ಳಿ-ಪಟ್ಟಣಗಳೊಳಗಿನ ವ್ಯತ್ಯಾಸ ನಿವಾರಣೆಯಾಗದಿದ್ದರೆ ದೇಶ ಪ್ರಗತಿ ಹೊಂದಲು ಸಾಧ್ಯವಿಲ್ಲವೆಂಬ ಮಾತನ್ನು ಕ್ರಾಂತಿವೀರ ಲೆನಿನ್ನರು ದಶಕದಹಿಂದೆಯೇ ಸಾರಿ ಹೇಳಿದ್ದರು. ಅಷ್ಟೇ ಅಲ್ಲ ರಶ್ಯಾದ ಮಹಾಕ್ರಾಂತಿಯ ನಂತರ ಈ ದಿಸೆಯಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದರು. ಆ ಕಾರಣದಿಂದಲೇ ಸೋವಿಯತ್ ದೇಶದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಹೊಸ ರೂಪ ಕಾಣುತ್ತಿದ್ದೇವೆ.

ಭಾರತದಲ್ಲಿ ಬಂಡವಾಳ ಪಥದ ಯೋಜನೆಗಳ ಅನುಷ್ಠಾನ ಜಾರಿಯಲ್ಲಿರುವುದರಿಂದ ಸರ್ವಸಾಮಾನ್ಯ ಜನತೆಯ ಅವಶ್ಯಕತೆಗಳನ್ನು ಪೂರೈಸುವ ಗಾಮ-ಪಟ್ಟಣಗಳೊಳಗಿನ ವ್ಯತ್ಯಾಸ ದೂರೀಕರಿಸುವ ದೃಷ್ಟಿಯಲ್ಲಿ ಕಾರ್ಯಕ್ರಮಗಳು ರೂಪಿಕರಿಸಲ್ಪಡದಿರುವುದರಿಂದ ಹೇಳಿಕೊಳ್ಳುವಂಥ ಬೆಳವಣಿಗೆ ಕಂಡುಬರುವುದಿಲ್ಲ.

ರಾಜ್ಯದಲ್ಲಿ ಜನತಾ ಸರಕಾರ ಅಧಿಕಾರಕ್ಕೆ ಬಂದನಂತರ ಗ್ರಾಮಾಂತರ ಪ್ರದೇಶಗಳ ಜನರ ಅವಶ್ಯಕತೆಗಳೆಡೆಗೆ ಗಮನಹರಿಸುವ ಕನಸು ಕಾಣುವಂತೆ ಕಂಡುಬರುತ್ತದೆ. "ಸಮಗ್ರಗ್ರಾಮೀಣ ಸಾರಿಗೆ ವ್ಯವಸ್ಥೆ"ಯ ಯೋಜನೆಯನ್ನು ಹೆಗಡೆ ಸರಕಾರ ಹಮ್ಮಿಕೊಂಡಿದೆಂದೂ ಪ್ರಾಯೋಗಿಕವಾಗಿ ಇದನ್ನು ಮೊದಲು ಬಳ್ಳಾರಿ ಮತ್ತು ಧಾರವಾಡಜಿಲ್ಲೆಗಳಲ್ಲಿ ಆರಂಭಿಸುವುದಾಗಿಯೂ ಸಾರಿಗೆ ಸಚಿವ ಪ್ರಕಾಶ ಅವರು ವಿಧಾನಸಭೆಯಲ್ಲಿ ಪ್ರಕಟಿಸಿದ್ದಾರೆ. ಸಾರಿಗೆ ಸಂಸ್ಥೆ ಪ್ರತಿವರ್ಷ ಕೋಟ್ಯಾವಧಿ ರೂಪಾಯಿ ನಷ್ಟಕ್ಕೊಳಗಾಗುತ್ತಿದೆಂದು ಹೇಳುತ್ತಿರುವಾಗಲೇ ಗ್ರಾಮಾಂತರ ಪ್ರದೇಶಕ್ಕೂ ಸಾರಿಗೆ ವ್ಯವಸ್ಥೆ ಒದಗಿಸುತ್ತೇವೆಂದು ಹೇಳಿರುವುದು ಸ್ವಾಗತಾರ್ಹವಾಗಿದ್ದರೂ, ಸಾರಿಗೆ ಸಂಸ್ಥೆಯ ಹೊಟ್ಟೆಯಲ್ಲಿ ಬೆಳೆದುಬಂದಿರುವ ಕ್ಯಾನ್ಸರ್ ರೋಗವನ್ನು ಶಸ್ತ್ರಕ್ರಿಯೆಯಿಂದ ತೆಗೆಯುವುದು ಅತ್ಯಗತ್ಯವೆಂದು ನಾವು ಸಾರಿ ಹೇಳಲೇಬೇಕಾಗಿದೆ. ಆ ರೀತಿಯ ಆಪರೇಶನ್ ಆಗದಿದ್ದರೆ ನಷ್ಟದ ಹೊರೆಯನ್ನು ಸಾರ್ವಜನಿಕರೇ ಹೊರಬೇಕಾಗುತ್ತದಲ್ಲದೆ, ಗ್ರಾಮಾಂತರ ಜನರಿಗೆ ಒದಗಿಸುವ ಸೌಕರ್ಯಗಳ ಫಲ ಅವರಿಗೆ ನಿಜವಾಗಿಯೂ ದಕ್ಕದಂತೆ ಆಗುವುದರಲ್ಲಿ ಸಂಶಯವಿಲ್ಲ. ಜನತಾ ಸರಕಾರ ಈ ದಿಸೆಯಲ್ಲಿ ಉಗ್ರಕ್ರಮ ಕೈಗೊಳ್ಳುವುದು ಅತ್ಯಗತ್ಯ.

ಅಸಂಬದ್ಧ ಶಿಕ್ಷಣ ನೀತಿ

ರಾಜ್ಯದ ಪ್ರಾಥಮಿಕ ಶಾಲೆಗಳಲ್ಲಿ ಈಗ ಖಾಲಿ ಬಿದ್ದಿರುವ ಹದಿಮೂರು ಸಾವಿರ ಶಿಕ್ಷಕರ ಹುದ್ದೆಗಳ ಪೈಕಿ ಆರು ಸಾವಿರ ಹುದ್ದೆಗಳನ್ನು ಈ ವರ್ಷ ಕರಾರಿನ ಮೇಲೆ ತುಂಬಲಾಗುವುದೆಂದು ಶಿಕ್ಷಣ ಸಚಿವ ಬಿ. ರಾಚಯ್ಯನವರು ವಿಧಾನ ಸಭೆಯಲ್ಲಿ ಹೇಳಿದರು. ಇನ್ನುಳಿದ ಏಳು ಸಾವಿರ ಹುದ್ದೆಗಳನ್ನು 84-85ರಲ್ಲಿ ತುಂಬಲಾಗುವುದಂತೆ. ಪ್ರಾಥಮಿಕ ಶಿಕ್ಷಕರ ವೇತನ ಶ್ರೇಣಿಗಿಂತ ಹತ್ತು ರೂ. ಕಮ್ಮಿ ವೇತನದಲ್ಲಿ ಈ ಹುದ್ದೆಗಳಲ್ಲಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುವುದಂತೆ.

ಪ್ರಾಥಮಿಕ ಕಡ್ಡಾಯ ಶಿಕ್ಷಣವನ್ನು ವಿಸ್ತರಿಸುವ ಯೋಜನೆಯನ್ನು ಸರಕಾರ ಘೋಷಿಸಿದೆ. ಅದರಂತೆಯೇ 30-40 ವಿದ್ಯಾರ್ಥಿಗಳು ಬರುವೆಡೆಗಳಲ್ಲಿಯೂ ಶಾಲೆಗಳನ್ನು ಪ್ರಾರಂಭಿಸುವ ಕಾರ್ಯಕ್ರಮ ಇಟ್ಟುಕೊಳ್ಳಲಾಗಿದೆ. ಶಿಕ್ಷಕರ ಅಭಾವದಿಂದಾಗಿ ಎಷ್ಟೋ ಶಾಲೆಗಳಲ್ಲಿ ಮಕ್ಕಳಿಗೆ ಮೂಲಾಕ್ಷರಗಳ ಶಿಕ್ಷಣ ಸಿಗುತ್ತಿಲ್ಲ. ಇಂಥ ಪರಿಸ್ಥಿತಿಯಲ್ಲಿ ಕರಾರಿನ ಮೇಲೆ ಶಿಕ್ಷಕರನ್ನು ನೇಮಿಸಿಕೊಳ್ಳುತ್ತೆನೆಂದು ಸಾರುವುದರ ಅರ್ಥವೇನು ? ಇದರಿಂದ ಮಕ್ಕಳಿಗೂ, ಶಿಕ್ಷಕರಿಗೂ ಮೋಸ ಮಾಡಿದಂತಾಗುವುದಿಲ್ಲವೇ. ವಿಶ್ವ ಕನ್ನಡ ಮೇಳಕ್ಕೆ 5-6 ಕೋಟಿಖರ್ಚು ಮಾಡುವ ಜನತಾ ಸರಕಾರ ಹದಿಮೂರು ಸಾವಿರ ಪ್ರಾಥಮಿಕ ಶಿಕ್ಷಕರನ್ನು ನೇಮಿಸಿಕೊಂಡು ಅವರಿಗೆ ನ್ಯಾಯವಾಗಿ ಸಿಗತಕ್ಕ ಸೌಕರ್ಯಗಳನ್ನೊದಗಿಸಿ, ನಿರ್ಮಲ ಮನಸ್ಸಿನಿಂದ ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸುವ ಅವಕಾಶ ಮಾಡಿಕೊಡುವುದು ಸರಿಯಲ್ಲವೆ. ಕರಾರಿನ ಮೇಲೆ ಶಿಕ್ಷಕರ "ನೇಮಕಾತಿ ಯಾಕೆ? ಒತ್ತಾಯದಿಂದ ಬಸಿರಾದಳು"ಎಂಬಗಾದೆಯಂತೆ ಒತ್ತಾಯದ ಪ್ರಾಥಮಿಕ ಶಿಕ್ಷಣ, ಆದರೆ ಕರಾರಿನ ಮೇಲೆ ಶಿಕ್ಷಕರ ನೇಮಕ. ಜನತಾ ಸರಕಾರಕ್ಕೆ ಶೋಭೆ ತರಲಾರದ ನಿಲುವು ಇದು. ನಾವಿದನ್ನು ವಿರೋಧಿಸುತ್ತೇವೆ. ಸರಕಾರ ತನ್ನ ನಿಲುವೆಯನ್ನು ತಿದ್ದಿಕೊಳ್ಳಲಿ. ಇಲ್ಲವಾದರೆ ಶಿಕ್ಷಕರ ನ್ಯಾಯ ಹೋರಾಟಕ್ಕೆ ನಮ್ಮ ಬೆಂಬಲವಿದೆ.

ಒಂದು ಅಂದಾಜಿನಂತೆ ನಮ್ಮ ರಾಜ್ಯದಲ್ಲಿ ಇಂದಿಗೂ ಶಾಲೆಗಳಿಲ್ಲದ ಹಳ್ಳಿಗಳ ಸಂಖ್ಯೆ 5194 ರಷ್ಟಿದೆ. ಕೋಲಾರ ಜಿಲ್ಲೆ ಅತ್ಯಂತ ಹಿಂದುಳಿದ ಪ್ರದೇಶವಾಗಿದೆ. 1038 ಹಳ್ಳಿಗಳಿಗೆ ಪ್ರಾಥಮಿಕ ಶಾಲೆಗಳೇ ಇಲ್ಲವಾಗಿದೆ. ಈ ಸಮಸ್ಯೆಯ ಪರಿಹಾರಕ್ಕಾಗಿ ಪರಿಣಿತರ ಸಮಿತಿಯೊಂದು ಕಾರ್ಯಕ್ರಮ ಹಮ್ಮಿಕೊಂಡಿದ್ದು, ಆ ಯೋಜನೆಯಂತೆ 1986-87ರ ವರೆಗೆ 6 ರಿಂದ 13 ವರ್ಷ ವಯಸ್ಸಿನ ಶೇ. 70 ರಷ್ಟು ಮಕ್ಕಳಿಗೆ ಉಚಿತ ಪ್ರಾಥಮಿಕ ಶಿಕ್ಷಣ ದೊರಕಿಸಬೇಕಾದರೆ ಕನಿಷ್ಟ ರೂ. 800 ಕೋಟಿ ಖರ್ಚಾಗುತ್ತಂತೆ. ಶಿಕ್ಷಣ ಮಂತ್ರಿಯವರ ಹೇಳಿಕೆಯಂತೆ 10 ವರ್ಷಗಳ ಅವಧಿಯ ಯೋಜನೆಗೆ ರೂ. 65 ಕೋಟಿ ಬೇಕಾಗುತ್ತದೆ. ಯಾವುದೇ ಯೋಜನೆಯ ಸಫಲತೆಗೆ ಸಾವಿರಾರು ಶಿಕ್ಷಕರೂ, ಶಾಲೆ ಕಟ್ಟಡಗಳೂ, ಮಕ್ಕಳಿಗೆ ಪುಸ್ತಕ ಮೊದಲಾದ ಅವಶ್ಯಕತೆಗಳ ಪೂರೈಕೆಯಾಗಬೇಕು. ಶಿಕ್ಷಣದ ಕುರಿತು ಸರಕಾರ ಪ್ರಾಮಾಣಿಕ ನೀತಿಯನ್ನನುಸರಿಸುತ್ತಿಲ್ಲ. ವಿಧಾನ ಸಭೆಯಲ್ಲಿ ಮಂತ್ರಿಯವರ ಹೇಳಿಕೆ ಇದಕ್ಕೆ ಉದಾಹರಣೆಯಾಗಿದೆ. ಈ ನೀತಿಯಲ್ಲಿ ಬದಲಾವಣೆಯಾಗುವುದು ಅಗತ್ಯ.

ಬೆಲೆ ಏರಿಕೆ-ರಾಜ್ಯ ಸರಕಾರದ ಜವಾಬ್ದಾರಿ

"ಅಗತ್ಯ ವಸ್ತುಗಳ ಬೆಲೆಯೇರಿದೆ. ಅದು ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ. ಬೇಡಿಕೆ - ಪೂರೈಕೆ ನಡುವಣ ಅಂತರದಿಂದ ಬೆಲೆ ಏರಿದೆ. ಪಡಿತರ ಅಕ್ಕಿ ಹಂಚದ ಅಂಗಡಿಗಳ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳಲಾಗುವುದು" ಎಂದೆಲ್ಲ ಪುರಾಣ ಬಿಚ್ಚಿದವರು ಆಹಾರ ಸಚಿವ ಬಸವಣ್ಣಪ್ಪನವರು ವಿಧಾನ ಸಭೆಯಲ್ಲಿ.

ದಿಲ್ಲಿಯ ಇಂದಿರಾ ಸರಕಾರ ಹಿಂದಿನ ಕಾಂಗ್ರೆಸರಕಾರ ಹಾಡಿದ ಹಾಡನ್ನೇ ಜನತಾ ಸರಕಾರದ ಮಂತ್ರಿಯವರೂ ಹಾಡುತ್ತಿರುವುದು ನಾಚಿಕೆಗೇಡು. ಪಡಿತರ ಪದ್ಧತಿಯನ್ನು ಸುಧಾರಿಸಿ ವಿಸ್ತರಿಸಿ, ಗ್ರಾಹಕರಿಗೆ ಅವಶ್ಯಕ ವಸ್ತುಗಳು ಸುಲಭವಾಗಿ ನ್ಯಾಯ ಬೆಲೆಯಲ್ಲಿ ದೊರೆಯುವಂತೆ ಮಾಡುವ ಆಶ್ವಾಸನೆಯಿತ್ತ ಜನತಾ ಪಕ್ಷದ ಮಂತ್ರಿಗಳು ಹಳೇ ಕಾಂಗ್ರೆಸ್ ಧೋರಣೆಯಡಿಯಲ್ಲೇ ಆಶ್ರಯ ಪಡೆಯುತ್ತಿರುವುದು ಜನರಿಗೆ ದ್ರೋಹ ಬಗೆಯುತ್ತಿರುವಂತೆಯೇ ಸರಿ.

ಬಂಡವಾಳ ಶಾಹಿ ನೀತಿಯನ್ನೇ ಅನುಸರಿಸುತ್ತಿರುವ ಕಾಂಗ್ರೆಸ್ ಸರಕಾರದಿಂದ ಬೆಲೆ ಇಳಿಸಲು ಸಾಧ್ಯವಿಲ್ಲ, ಬೇಡಿಕೆ-ಪೂರೈಕೆ ನಡುವಣ ಅಂತರದಿಂದ ಬೆಲೆ ಹೆಚ್ಚಳವಾಗುತ್ತಿರುವುದು ಬಂಡವಾಳಶಾಹಿ ಸರಕಾರಗಳಲ್ಲಿ ಮಾತ್ರ. ಸಮತಾವಾದಿ ರಾಷ್ಟ್ರಗಳಲ್ಲಿ ಅಂಥ ಸಮಸ್ಯೆ ಇಲ್ಲವೆಂಬುದನ್ನು ರಷ್ಯಾ-ಚೀನಾ ಮೊದಲಾದ ಕಮ್ಯುನಿಸ್ಟ್ ರಾಷ್ಟ್ರಗಳು ತೋರಿಸಿ ಕೊಟ್ಟಿವೆ. ಖಾಸಗೀ ಮಾಲಕತ್ವ, ಕೆಲವೇ ಜನರ ಕೈಯಲ್ಲಿ ಲೋಕ ವ್ಯಾಪಾರ, ವ್ಯಾಪಾರಸ್ಥರಿಂದ ವಿತರಣಾ ಪದ್ಧತಿ ಬದಲಾಗಿ, ಉತ್ಪಾದನೆ-ವಿತರಣೆಯನ್ನು ಸಮಾಜೀಕರಣ ಮಾಡುವ ತನಕ ಈ ರೀತಿಯ ಶೋಷಣೆ ಮುಂದುವರಿಯುತ್ತದೆ. ಉತ್ಪಾದನೆ ಕಡಿಮೆಯಾದ ಮಾತ್ರಕ್ಕೆ ಬೆಲೆ ಹೆಚ್ಚಳ ಆಗುವ ಕಾರಣವೇನು? ಆ ರೀತಿಯ ಬೆಲೆ ಹೆಚ್ಚಳದಿಂದ ಉತ್ಪಾದನೆ ಮಾಡುವ ರೈತನಿಗಾಗಲೀ ಕಾರ್ಮಿಕನಿಗಾಗಲೀ ಲಾಭವಿಲ್ಲ. ಉತ್ಪಾದನಾ ಸಾಧನೆಗಳ, ಲೋಕ ವ್ಯಾಪಾರದ ಮಾಲಿಕರಿಗೆ ಮಾತ್ರ ಲಾಭಸಿಗುವುದಲ್ಲದೆ, ಬಡ-ಮಧ್ಯಮ ವರ್ಗದ ರೈತರಿಗಾಗಲೀ, ಕಾರ್ಮಿಕ ಮಧ್ಯಮ ವರ್ಗದವರಿಗಾಗಲೀ ಯಾವುದೇ ಉಪಯೋಗವಿಲ್ಲ. ಸಮತಾವಾದಿ ದೇಶಗಳೂ ಕೆಲವು ಸಲ ಕಡಿಮೆ ಉತ್ಪಾದನೆಯ ಅಥವಾ ಅಭಾವದ ಸಮಸ್ಯೆ ಎದುರಿಸುತ್ತಿವೆ. ಆದರೆ ಆ ಕಾರಣದಿಂದಾಗಿ ವಸ್ತುಗಳ ಬೆಲೆ ಮಾತ್ರ ಹೆಚ್ಚಾಗುವುದಿಲ್ಲ. ಯಾಕೆಂದರೆ ಉತ್ಪಾದನೆ-ವಿತರಣೆಗಳೆರಡೂ ಸರಕಾರದ-ಸಮಾಜದ ಜವಾಬ್ದಾರಿ ಸೊತ್ತಾಗಿರುತ್ತವೆ. ಅಲ್ಲಿ ವ್ಯಕ್ತಿ ಲಾಭಗಳಿಸುವ ಪ್ರಶ್ನೆಯಿಲ್ಲ. ಬೆಲೆ ಹೆಚ್ಚಳದ ಭೂತವಿಲ್ಲ, ಇಡೀ ಸಮಾಜದ ಹಿತವೇ ಅವರ ಗುರಿ. ಆದ್ದರಿಂದ ಉತ್ಪಾದನೆ-ವಿತರಣೆಯಲ್ಲಿಯ ಅಂತರದಿಂದ ಕೆಲವರಿಗಷ್ಟೇ ಲಾಭವಾಗುತ್ತದೆ. ಆ ಕಾರಣದಿಂದ ಬೆಲೆ ಹೆಚ್ಚಳವಾಗುವುದು ನ್ಯಾಯವಲ್ಲ.

ಆ ಕಾರಣದಿಂದಲೇ ಉತ್ಪಾದನಾ ಸಾಧನೆಗಳನ್ನೆಲ್ಲ ರಾಷ್ಟ್ರೀಕರಣ ಮಾಡಬೇಕೆಂದು ನಾವು ಒತ್ತಾಯ ಪಡಿಸುತ್ತಿರುವಾಗಲೇ, ತುರ್ತು ಸಮಸ್ಯೆಯ ಪರಿಹಾರಕ್ಕಾಗಿ ಲೋಕ ವ್ಯಾಪಾರದ ಜವಾಬ್ದಾರಿಯನ್ನು ಸರಕಾರವೇ ಪೂರ್ಣ ವಹಿಸಿಕೊಂಡು, ಪಡಿತರ ಅಂಗಡಿಗಳ ಮೂಲಕ ಸಾಕಷ್ಟು ಆಹಾರ ಧಾನ್ಯ ವಿತರಣೆ ಮಾಡಬೇಕೆಂದೂ ಒತ್ತಾಯ ಪಡಿಸುತ್ತಿದ್ದೇವೆ.

ಈಗ ಚಾಲ್ತಿಯಲ್ಲಿರುವ ಪಡಿತರ ಪದ್ಧತಿ ಅತ್ಯಂತ ಅಸಮಾಧಾನಕಾರಕವಾಗಿದೆ. ಮಂತ್ರಿಗಳ ಹೇಳಿಕೆಗಳಿಂದಲೇ ಸಮಾಧಾನ ಪಡೆಯಬೇಕಲ್ಲದೆ, ಸಾಕಷ್ಟು ಆಹಾರ ಧಾನ್ಯ ಪಡೆಯುವುದರಿಂದಲ್ಲ. ಬೆಲೆ ಹೆಚ್ಚಳ ಸಾರ್ವಜನಿಕರನ್ನು ಕೊರೆದು ತಿನ್ನುತ್ತಿದೆ. ಜನ ಕಂಗಾಲಾಗಿದ್ದಾರೆ. ಕರ್ನಾಟಕದಲ್ಲಿ ಜನತಾ ಪಾರ್ಟಿ ಮೇಲೆ, ಬೆಲೆ ಹೆಚ್ಚಳದ ಆರೋಪ ಹೊರಿಸಲಾಗುತ್ತಿದೆ. ಆದ್ದರಿಂದ ಹೆಗಡೆ ಸರಕಾರ ದಿಲ್ಲಿ ಕಡೆ ಬೊಟ್ಟುಮಾಡಿ ತೋರಿಸದೆ, ಸರಕಾರವೇ ಸಂಗ್ರಹಿಸಿರುವ ಆಹಾರ ಧಾನ್ಯವನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡಬೇಕು. ಪಡಿತರ ಅಂಗಡಿಗಳು ಕೂಡ ತಮಗೆ ಕೊಡ ಮಾಡಿದ ಧಾನ್ಯವನ್ನು ಸರಿಯಾಗಿ ವಿತರಣೆ ಮಾಡುತ್ತಿಲ್ಲ. ಹೆಚ್ಚಿನ ಪಾಲು ಆಹಾರಧಾನ್ಯ ಮತ್ತು ಎಣ್ಣೆ ಖಾಸಗೀ ವ್ಯಾಪಾರಸ್ಥರ ಅಂಗಡಿ ಸೇರುತ್ತಿದೆ. ಇದರ ವಿತರಣೆ ಸರಿಯಾಗುವಂತೆ ನೋಡಿಕೊಳ್ಳಲು ಜಾಗೃತ ಜನತಾ ಕಮಿಟಿಗಳನ್ನು ನೇಮಿಸುವುದು ಅಗತ್ಯ. ಈ ವ್ಯವಸ್ಥೆಯ ಕುರಿತು ಸರಕಾರವಾಗಲೀ ಶಾಸಕರಾಗಲೀ ಚಕಾರ ಶಬ್ದ ಎತ್ತದಿರುವುದು ಆಶ್ಚರ್ಯ. ಆದ್ದರಿಂದ ಸರಕಾರದ ಕಣ್ಣು ತೆರೆಯಲು, ಅದು ತನ್ನ ಧೋರಣೆಯನ್ನು ಬದಲಾಯಿಸುವಂತೆ ಮಾಡಲು, ನಾಗರೀಕರಿಗೆ ನ್ಯಾಯ ಬೆಲೆಯಲ್ಲಿ ದವಸ ಧಾನ್ಯ, ಎಣ್ಣೆ ಹಾಗೆಯೇ ಇತರ ಆವಶ್ಯಕ ವಸ್ತುಗಳು ಸಿಗುವಂತೆ ಮಾಡಲು ಬಲಿಷ್ಠವಾದ ಜನತಾ ಆಂದೋಲನ ನಡೆಸಬೇಕು.

ಆಹಾರ ಸಮಸ್ಯೆ ಮತ್ತು ಭೂಸುಧಾರಣೆ

(3ನೇ ಪುಟದಿಂದ)

ಹೀಗಿರುವಾಗ ಭೂಮಿ ಕೆಲವೇ ಜಮೀನುದಾರರ, ಜೋಡೀದಾರರ, ಲೇವಾದೇವಿಗಾರರ ಹತ್ತಿರ ಕೇಂದ್ರೀಕೃತವಾಗಿ ಉಳಿದರೆ, ಬಹುಸಂಖ್ಯಾತ ಕೃಷಿಕರು ರೈತರು, ಬಡವರು, ಭೂರಹಿತರಾದರೆ ಅಥವಾ ತೀರಾ ಕಡಿಮೆ ಭೂಮಿ ಹೊಂದಿದವರಾಗಿದ್ದರೆ, ಮತ್ತು ಇವರ ಶ್ರಮದ ಫಲವು ತಮ್ಮ ಕುಟುಂಬದ ಸದಸ್ಯರ ಮುಖಗಳಲ್ಲಿ ನಗೆಯರಳಿಸದೇ, ಜೋಡೀದಾರ, ಲೇವಾದೇವೀಗಾರರನ್ನು ಕೊಬ್ಬಿಸಿದರೆ ದುಡಿಯುವವರ ಕ್ರಿಯಾಶೀಲತೆ, ಮೊದಲ ಹೆಜ್ಜೆ ಎಲ್ಲ ಉಡುಗಿ ಹೋಗುವುವು. ಇಂಥ ಸ್ಥಿತಿಯಲ್ಲಿ ರೈತರು ಮನಸ್ಸಿನಲ್ಲಿ ಮನಸ್ಸಿಟ್ಟು ದುಡಿಯಲಾರರು ಮತ್ತು ಅವರ ಸ್ಫೂರ್ತಿ ನಶಿಸುತ್ತದೆ.

ಬ್ರಿಟೀಷ್ ಪೂರ್ವ ಭಾರತದಲ್ಲಿ ಉಳುವವನೇ, ಸಾಮಾನ್ಯವಾಗಿ ಭೂಒಡೆಯನಾಗಿದ್ದ. ಹೀಗಾಗಿ ರೈತರು ಭೂಮಿಯನ್ನು ಫಲವತ್ತಾಗಿಸಿದ್ದರು. ಬ್ರಿಟೀಷ್ ಆಳ್ವಿಕೆಯ, ಕಾಲದಲ್ಲಿ ವಿದೇಶಿಯರ ಮತ್ತು ಭೂಮಾಲಿಕರ ಶೋಷಣೆಯಿಂದಾಗಿ ಅನೇಕ ರೈತರು ಜಮೀನು ಕಳೆದುಕೊಂಡರು. ಅವರ ಭೂಮಿ ಲೇವಾದೇವೀಗಾರರ, ಜೋಡೀದಾರರ ವಶವಾಯಿತು. ರೈತರು ಹಣಕಾಸಿನ ವಿಷಯದಲ್ಲಿ ತುಂಬ ಬಡವರಾದರು. ತಮ್ಮ ಸತ್ವ ಚೈತನ್ಯವನ್ನು ಕಳೆದುಕೊಂಡರು, ಭೂಮಿಗಳೂ ಬಡವಾದವು.

ಯಾರು ಇನ್ನೊಬ್ಬರಿಗೆ, ಅಸಕ್ತಿಯಿಂದ ದುಡಿಯಲು ಸಾಧ್ಯ? ಕೃಷಿಗೆ ಇಂಥ ಬಡರೈತ ಸಾಧನಗಳನ್ನು ಎಲ್ಲಿಂದ ತೊಡಗಿಸಬೇಕು. ಅಧಿಕ ಭಾರತವೆಲ್ಲ ಕೊರತೆಯದಾಗಿ ಪರಿಣಮಿಸಿತು.

ಸ್ವಾತಂತ್ರ್ಯದ ನಂತರ, ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆ ಆಗಬೇಕಿತ್ತು. ಭೂ ಹೀನರಿಗೆ, ಭೂಮಾಲೀಕರ, ಜೋತೇದಾರರ, ಬಡ್ಡಿದಾರರ ಜಮೀನನ್ನು ಹಂಚಿದ್ದರೆ, ಭೂಮಾಲಿಕರ ಊಳಿಗಮಾನ್ಯ ಶೋಷಣೆಯನ್ನು ನಾಶಮಾಡಿದ್ದರೆ, ಸಾಲಗಳಿಂದ ರೈತರನ್ನು ಮುಕ್ತಮಾಡಿ ಸರ್ಕಾರ ಸಹಾಯ ಒದಗಿಸಿದ್ದರೆ, ಕೃಷಿ ಉತ್ಪಾದನೆಯಲ್ಲಿ ಅತ್ಯದ್ಭುತ ಪ್ರಗತಿಯನ್ನು ಸಾಧಿಸಲು ಸಾಧ್ಯವಿತ್ತು. ಶೋಷಣೆಯಿಲ್ಲದೆ ರೈತ ಮನಸ್ಸಿನಲ್ಲಿ ಮನಸಿಟ್ಟು ದುಡಿಯುತ್ತಿದ್ದ, ದೇಶವನ್ನು ಕಟ್ಟಲು ಸಾಕಷ್ಟು ಸಂಪತ್ತು ಉತ್ಪತ್ತಿ ಆಗುತ್ತಿತ್ತು. ಊಳಿಗಮಾನ್ಯ ಶೋಷಣೆಯಿಂದ ಮುಕ್ತರಾದ ರೈತರು ಕೃಷಿ ಉತ್ಪನ್ನ ಹೆಚ್ಚಿಸಿ, ಕೈಗಾರಿಗೆ ಹೆಚ್ಚು ಕಚ್ಚಾ ವಸ್ತುವನ್ನು ಒದಗಿಸುತ್ತಿದ್ದರು. ವಿದೇಶಿ ಸಹಾಯಕ್ಕೆ ಕೈಯೊಡ್ಡುವ ಸ್ಥಿತಿ ತಪ್ಪುತ್ತಿತ್ತು.

ಆದರೆ ಅಧಿಕಾರಕ್ಕೆ ಬಂದ ಪ್ರಭುತ್ವ ಶಕ್ತಿ ಭೂಮಾಲಿಕ, ಲೇವಾದೇವಿಗಾರರ ಸಹಯೋಗದಿಂದ, ಈ ಎಲ್ಲ ಕ್ರಮಗಳಿಗೆ ಜೋತು ಬೀಳಲಿಲ್ಲ. ಭೂಸುಧಾರಣೆ, ಭೂಮಾಲಿಕ ಪದ್ಧತಿಯ ರದ್ಧತಿಯ ಹೆಸರಿನಲ್ಲಿ ಅಸಂಖ್ಯ ಶಾಸನಗಳನ್ನು ಮಾಡಲಾಯಿತು. ಆದರೆ ಕೃಷಿ ವ್ಯವಸ್ಥೆಯಲ್ಲಿ ಯಾವ ಮೂಲಭೂತ ಬದಲಾವಣೆ ಬರಲಿಲ್ಲ. ಭೂಮಿಯ ಕೇಂದ್ರೀಕರಣವನ್ನು ಉಳಿಸಲಾಯಿತು. ಗೇಣಿದಾರರನ್ನು ಭೂಮಿಯಿಂದ ಹೊರದಬ್ಬುವುದು ಹೆಚ್ಚಿತು. ಕೃಷಿ ಕೂಲಿಕಾರರ ಪಡೆ ಹೆಚ್ಚಿತು. ಹಳ್ಳಿಗಾಡು ಬದುಕಿನ ಮೇಲೆ ಭೂಮಾಲಿಕರ ಜೋತೇದಾರರ ಹಿಡಿತ ಬಲಿಷ್ಟವಾಯಿತು. ಇವರು ಧಾನ್ಯವನ್ನು ದಾಸ್ತಾನು ಮಾಡುತ್ತ, ಆಹಾರದ ಅಭಾವ ಸೃಷ್ಟಿ ಆಯಿತು. ಉತ್ಪಾದನೆ ನಿರ್ಮುಕ್ತ ಅಭಿವೃದ್ಧಿ ಹೊಂದಬೇಕಾದರೆ ಈ ಭೂ ವ್ಯವಸ್ಥೆ ಬದಲಾಗಲೇಬೇಕು.

ಒಬ್ಬ ಜಮೀನುದಾರನಿಗೆ 500, 1000 ಅಥವಾ 2000 ಬೀಘಾ ಜಮೀನು ಇದ್ದರೆ ಅನಿವಾರ್ಯವಾಗಿ ಬಹಳ ಜನ ರೈತರಿಗೆ ಮತ್ತು ಕೂಲಿಕಾರರಿಗೆ ಭೂಮಿ ಇಲ್ಲದಾಗುತ್ತದೆ. ಇಂಥ ಸ್ಥಿತಿಯಲ್ಲಿ ಶ್ರಮಜೀವಿ ವರ್ಗ ಮತ್ತು ರೈತರು, ತಮ್ಮ ಜೀವನ ನಿರ್ವಹಣೆಗೆ ಅನಿವಾರ್ಯವಾಗಿ ಜಮೀನುದಾರರಿಗೆ ಶರಣು ಹೊಡೆಯಬೇಕಾಗುತ್ತದೆ. ಕಡಿಮೆ ಕೂಲಿಗೆ, ಗೇಣಿಗೆ ದುಡಿಯಬೇಕಾಗುತ್ತದೆ. ಸಾಕಷ್ಟು ಧಾನ್ಯವನ್ನು ಒಕ್ಕುವುದರಿಂದ ಜೋತೇದಾರರು, ಜಮೀನುದಾರರು ಸುಗ್ಗಿಯ ತಕ್ಷಣ ತಮ್ಮ ಧಾನ್ಯ ಮಾರದೆ ದಾಸ್ತಾನು ಮಾಡುತ್ತಾರೆ. ಸರಕಾರಿ ಯಂತ್ರದ ಜತೆ ಸಹಯೋಗದಿಂದಿರುವ ಇವರು ಯಾವ ಕಾಯಿದೆಗಳನ್ನೂ ಮೀರಿ ದಾಸ್ತಾನಿಸುತ್ತಾರೆ. ದರ ಏರಿದಾಗ ಮಾರುತ್ತಾರೆ. ಹೆಚ್ಚು ಲಾಭ ಪಡೆಯುವ ಭೂಮಾಲಿಕರು ಸರಕಾರದಿಂದ ಆಧುನಿಕ ಯಂತ್ರಜ್ಞಾನ, ಸಾಲ ಸವಲತ್ತುಗಳನ್ನು ಹೀರಿಕೊಂಡು ಹೆಚ್ಚು ಉತ್ಪಾದಿಸುತ್ತಾರೆ. ಇದಕ್ಕೆ ವಿರುದ್ಧವಾಗಿ ಬಡ ಕೃಷಿಕರು ಕೂಲಿಗಳಿಗೆ ಯಾವ ಸಹಾಯ-ಸವಲತ್ತುಗಳಾಗಲೀ ದುಡಿಮೆಗೆ ಸ್ಫೂರ್ತಿಯಾಗಲೀ ಸಿಕ್ಕದೆ ಶೋಷಣೆಗೆ ಗುರಿಯಾಗುತ್ತಾರೆ. ಲಾಭವೇ ಗುರಿಯಾಗಿರುವ ಈ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಬಡರೈತರು ಮಾರಿದ ಧಾನ್ಯವನ್ನೂ ಕೂಡ ಮಿಲ್ ಚಾಲಕರು, ಉದ್ಯೋಗಪತಿಗಳು ದಾಸ್ತಾನು ಮಾಡುತ್ತಾರೆ.

ಭೂಮಾಲಿಕ ಬಂಡವಾಳಶಾಹಿ ಸರಕಾರವು ಈ ಯಾವ ಸ್ಥಿತಿಯ ವಿರುದ್ಧವೂ ಎಂದೂ ನಿಲ್ಲಲಾರದು. ದೊಡ್ಡ ಹಿಡುವಳಿದಾರರ ಮಾಲಿಕತ್ವವನ್ನು ರದ್ದು ಮಾಡದವರೆಗೆ, ರಾಜ್ಯವೇ ಧಾನ್ಯ ವ್ಯಾಪಾರವನ್ನು ತನ್ನ ಕೈಗೆ ತೆಕ್ಕೊಳ್ಳದವರೆಗೆ ಸುಧಾರಣೆ ಅಸಾಧ್ಯ.

ಹೀಗೆ ಆಹಾರದ ಕೊರತೆ ಮತ್ತು ಬಿಕ್ಕಟ್ಟಿನ ಮೂಲದಲ್ಲಿ ಊಳಿಗಮಾನ್ಯ ಭೂವ್ಯವಸ್ಥೆ ಕಾರಣವಾಗಿದೆ. ಇದು ಹಳ್ಳಿಗಾಡಿನ ಇಡೀ ಜನ ವರ್ಗವನ್ನು ಬಾಧಿಸಿದೆ. ಅಮೇರಿಕದ ಸಾಮ್ರಾಜ್ಯಶಾಹಿಯ ಮೇಲೆ ಅವಲಂಬಿಸುವಂತೆ ಮಾಡಿದೆ, ದೇಶದ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತಿದೆ. ಅಂತೆಯೇ ಇಡೀ ಜನತೆಯ ಹಿತಾಸಕ್ತಿಯ ರಕ್ಷಣೆಗೆ ಭೂ ಮಾಲಿಕ ವ್ಯವಸ್ಥೆಯನ್ನೇ ಮೂಲಭೂತವಾಗಿ ನಾಶ ಮಾಡುವ ತುರ್ತು ಅಗತ್ಯವಿದೆ.

ಜನತೆಯ ಪ್ರಜಾಸತ್ತಾತ್ಮಕ ಕೇಂದ್ರ ವಿಚಾರ "ಭೂಸುಧಾರಣೆ" ಆಗಿದೆ. 'ಭೂ ಸುಧಾರಣೆ' ಎಂದರೆ ಭೂ ಶಾಸನಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಎಂದಲ್ಲ. ಭೂ ವ್ಯವಸ್ಥೆಯ ಕೆಲವು ರಚನಾತ್ಮಕ ಸುಧಾರಣೆ ಎಂದು ಇದರರ್ಥವಲ್ಲ. ಭೂ ಸಂಬಂಧಗಳಲ್ಲಿ, ವರ್ಗ ಆಧಾರಿತವಾದ ಕ್ರಾಂತಿಕಾರಿ ಬದಲಾವಣೆಯೇ ಭೂ ಸುಧಾರಣೆಯಾಗಿದೆ.

ಆಳುವ ವರ್ಗಗಳು ಸಹಕಾರಿ ಕೃಷಿ ಪದ್ಧತಿಯ ಬಗ್ಗೆ ಮಾತನಾಡುತ್ತವೆ. ಆದರೆ ಊಳಿಗಮಾನ್ಯ ಪದ್ಧತಿಗಳು ಉಳಿದಿರುವಲ್ಲಿ, ಭೂಮಾಲಿಕರಲ್ಲಿ ಭೂಮಿ ಕೇಂದ್ರೀಕೃತವಾಗಿರುವಲ್ಲಿ, ಬಹು ಸಂಖ್ಯಾತ ರೈತ-ಕೃಷಿಕೂಲಿಕಾರರಲ್ಲಿ ಭೂಮಿ ಇಲ್ಲದಲ್ಲಿ ಸಹಕಾರಿ ಕೃಷಿ ಪದ್ಧತಿ ಸಫಲವಾಗಲಾರದು. ಭೂ ಸುಧಾರಣೆಗಿಂತ ಮೊದಲು ಕೃಷಿ ಸಹಕಾರಿ ಪದ್ಧತಿ ಬಗ್ಗೆ ಮಾತನಾಡುವುದು ಎಂದರೆ ಕುದುರೆಯ ಮುಂದೆ ಗಾಡಿಯನ್ನು ಕಟ್ಟಿದಂತಾಗುತ್ತದೆ.

ಬೂರ್ಷ್ವಾಗಳು ಭೂ ಸುಧಾರಣೆಯನ್ನು "ಸಾಮಾಜಿಕ ನ್ಯಾಯ" ಮತ್ತು "ರಚನಾತ್ಮಕ ಸುಧಾರಣೆ" ಎಂದಷ್ಟೇ ಪ್ರಚಾರ ಮಾಡುತ್ತಿದ್ದಾರೆ. ಬೂರ್ಷ್ವಾ ಆಡಳಿತ ಶಾಹಿಯನ್ನು' ಆಳುವ ವರ್ಗಗಳನ್ನು ಅವಲಂಬಿಸಿ ಕ್ರಾಂತಿಕಾರಿ ಭೂ ಸುಧಾರಣೆ ತರಲು ಸಾಧ್ಯ. ಕಾಯಿದೆಯೊಳಗಿನ ಮಾತುಗಳನ್ನು ಉಪಯೋಗಿಸಿಕೊಂಡು ಭೂಮಾಲಿಕರು ತಮ್ಮ ಹೆಚ್ಚುವರಿ ಜಮೀನು ಉಳಿಸಿಕೊಂಡಿರುವರು. ಕಾಯಿದೆಗಳ ಪರಿಷ್ಕಾರದಿಂದಾಗಲೀ, ಭೂಮಿಯ ಮಿತಿಯನ್ನು ಹೆಚ್ಚು ಮಾಡುವುದರಿಂದಾಗಲೀ ಭೂಮಾಲಿಕತ್ವ ರದ್ದು ಮಾಡಲಿಕ್ಕಾಗದು. ಆದರೆ ತತ್ಕ್ಷಣ ಕಾಯಿದೆಗಳ ಪರಿಷ್ಕರಣ ಆಗಬಾರದೆಂದಲ್ಲ. ಆದರೆ ಇದರ ಪ್ರತಿಫಲ ತೀರ ಸಣ್ಣದಿರುತ್ತದೆಂಬುದನ್ನು ಅರಿತಿರಬೇಕು. ಈಗ ನಮಗೆ ಬೇಕಾಗಿರುವುದು ತೀವ್ರವಾದ ಕಾರ್ಯಾಚರಣೆ. ಜಮೀನುದಾರರ ಜೋತೇದಾರರ ದಾಖಲೆಗಳು ಸುಳ್ಳೆಂದು ಸಾರಬೇಕು. ಅವರಿಗೆ ಯಾವ ಅವಕಾಶ-ಸವಲತ್ತು ಕೊಡಬಾರದು. ಹಳ್ಳಿಗಳ ದುಡಿಯುವ ರೈತರೇ ಯಾರು ಭೂಮಾಲಿಕರೆಂಬುದನ್ನು ಪತ್ತೆ ಹಚ್ಚಿ, ಯಾರ ಭೂಮಿ ಹಂಚಲ್ಪಡಬೇಕೆಂಬುದನ್ನು ನಿರ್ಧರಿಸಬೇಕು. ಯಾವ ರೈತನೂ ತೊಂದರೆಗೊಳಗಾಗಬಾರದು. ರೈತರಿಂದ ಮಧ್ಯಮವರ್ಗದ ಕೈಲಿ ಇರುವ ಭೂಮಿಯನ್ನು ಬದುಕುವ ಬದಲಿ ವ್ಯವಸ್ಥೆ ಅವರಿಗೆ ಆಗುವವರೆಗೆ ರಕ್ಷಣೆ ಸಿಗಬೇಕು. ಹೀಗಾದಾಗಲೆ ಊಳಿಗಮಾನ್ಯ ಶೋಷಣೆಯ ವ್ಯವಸ್ಥೆಯನ್ನು ಮುರಿದು ಹಾಕಬಹುದು. ಇದೇ ನಿಜವಾದ ಪ್ರಗತಿಯ ಏಕೈಕ ದಾರಿ. ಈಗಿರುವ ಆಡಳಿತ ಶಾಹಿಯಿಂದ ಇದಾಗದು. ದುಡಿಯುವ ಜನರ ಮುಖಂಡತ್ವದಲ್ಲಿ ಪ್ರಜ್ಞಾವಂತ ರೈತವರ್ಗ ಮಾತ್ರ ಈ ಕೆಲಸವನ್ನು ಪೂರೈಸಬಲ್ಲದು. ಈಗಿನ ಭೂಮಾಲೀಕ-ಬಂಡವಾಳಶಾಹಿ ಆಳ್ವಿಕೆಯಲ್ಲಿ ಇದೆಲ್ಲ ಆಗದು. ಅಂತೆಯೇ ನಿಜವಾದ ಭೂಸುಧಾರಣಾ ಚಳುವಳಿಗೂ ಶೋಷಕವರ್ಗದ ಆಳ್ವಿಕೆಯನ್ನು ಕೊನೆಗಾಣಿಸಬೇಕೆಂಬ ಪ್ರಜಾಸತ್ತಾತ್ಮಕ ಹೋರಾಟಕ್ಕೂ ನಿಕಟ ಸಂಬಂಧವಿದೆ.

ಕೃಷಿಕ ಹಿತಾಸಕ್ತಿಯ ಭೂ ಸುಧಾರಣೆ, ಅಥವಾ ಕೃಷಿಕ್ರಾಂತಿಯೇ ಪ್ರಜಾಸತ್ತಾತ್ಮಕ ಕ್ರಾಂತಿಯ ಜೀವಕೇಂದ್ರ. ಪ್ರಜಾಸತ್ತಾತ್ಮಕ ಕ್ರಾಂತಿಯ ಸಫಲತೆಯೇ ಕೃಷಿ ಕ್ರಾಂತಿಯ ಸಫಲತೆ ಆದೀತು. ಇದಕ್ಕಾಗಿ ರೈತರನ್ನು, ಕೂಲಿಕಾರರನ್ನು, ದುಡಿಯುವ ಜನವರ್ಗಗಳನ್ನು ಸಂಘಟಿಸಿ, ಐಕ್ಯ ಹೋರಾಟಕ್ಕೆ ತಂದು ಪ್ರಜಾಸತ್ತಾತ್ಮಕ ಕ್ರಾಂತಿಗೆ ಇಳಿಸುವುದೇ ಪ್ರಮುಖ ಕಾರ್ಯಭಾರವಾಗಿದೆ.

ಸಂ : **ಎಸ್. ಎಸ್. ಹಿರೇಮಠ**

ವಿಜಯನಗರದ ಉಕ್ಕು ಕಾರ್ಖಾನೆಗೆ ಒತ್ತಾಯಿಸಿ ಪ್ರದರ್ಶನ

ಬೆಂಗಳೂರು

ತಾ|| 25-8-83ರಂದು ಮೈಸೂರು ಬ್ಯಾಂಕ್ ಚೌಕದಿಂದ ಹೊರಟ ಮೆರವಣಿಗೆಯು ಮಳೆಯಲ್ಲಿ ನೆನೆಯುತ್ತಾ ಸಂಜೆ 6ಕ್ಕೆ ರಾಜಭವನವನ್ನು ತಲುಪಿತು. ರಾಜ್ಯ ಸಂಚಾಲಕ ಕಾ| ಎಸ್. ಶಿವರಾಂ, ಜಿಲ್ಲಾ ಸಂಚಾಲಕ ಎನ್. ಚೆಲುವರಾಜ್, ಸಂಘಟನಾ ಸಮಿತಿಯ ಸದಸ್ಯರಾದ ಕೃಷ್ಣಮೂರ್ತಿ ಮತ್ತು ಶ್ರೀರಾಂಪುರ ಘಟಕದ ಅಧ್ಯಕ್ಷರಾದ ಕಾ| ಶ್ರೀನಿವಾಸ್ ಅವರುಗಳು ರಾಜ್ಯಪಾಲರನ್ನು ಭೇಟಿಯಾಗಿ ರಾಜ್ಯದಲ್ಲಿ ಕಾರ್ಖಾನೆಯನ್ನು ಸ್ಥಾಪಿಸಲು ಲಭ್ಯವಿರುವ ವಿದ್ಯುತ್, ಸುಣ್ಣದಕಲ್ಲು, ನೀರು ಮತ್ತು ಬಿಹಾರ, ಪಶ್ಚಿಮ ಬಂಗಾಳ ಹಾಗೂ ಆಂಧ್ರದ ಸಿಂಗರೇಣಿಯಿಂದ ಕಲ್ಲಿದ್ದಲನ್ನು ತರಬಹುದೆಂದು ವಿವರಿಸಿ ಕೇಂದ್ರ ಸರ್ಕಾರ ತನ್ನ ಮಲತಾಯಿ ಧೋರಣೆಯನ್ನು ಬದಲಾಯಿಸಿ ಕಾರ್ಖಾನೆಯನ್ನು ಶೀಘ್ರವಾಗಿ ಪ್ರಾರಂಭಿಸದಿದ್ದರೆ ಡಿ. ವೈ. ಎಫ್. ಐ. ಇತರ ವಿದ್ಯಾರ್ಥಿ ಯುವಜನರನ್ನು ಒಂದು ಕಡೆಗೆ ತಂದು ರಾಜ್ಯ ಮಟ್ಟದ ಐಕ್ಯ ಹೋರಾಟಕ್ಕೆ ಮುಂದುವರಿಯುವುದು ಅನಿವಾರ್ಯವೆಂದು ಹೇಳಿದರು.

ಕೋಲಾರ

ಚಿಂತಾಮಣಿ ನಗರದ ತಾಲ್ಲೂಕ್ ಆಫೀಸ್ ಎದುರು ಬೆಳಿಗ್ಗೆ 10ರಿಂದ ಸಂಜೆ 5ರ ವರೆವಿಗೆ ಧರಣಿ ನಡೆಸಿ ಸಂಜೆ 500ಕ್ಕೂ ಹೆಚ್ಚು ಯುವಜನರು ಮೆರವಣಿಗೆ ನಡೆಸಿದರು. ಕಾರ್ಯಕ್ರಮದ ನೇತೃತ್ವ ವಹಿಸಿದ್ದ ರಾಜ್ಯ ಸಂಘಟನಾ ಸಮಿತಿಯ ಸದಸ್ಯ ಹಾಗು ಜಿಲ್ಲಾ ಸಂಚಾಲಕರಾದ ಕಾ| ಕೆ. ವಿ. ಸತ್ಯನಾರಾಯಣ ಹಾಗು ಚಿಂತಾಮಣಿ ತಾಲ್ಲೂಕ್ ಸಂಚಾಲಕರಾದ ಕಾ| ಸಿ. ವಿ. ಎಂ. ಸ್ವಾಮಿ ಹಾಗೂ ಅಪ್ಪಾರೆಡ್ಡಿ ಅವರುಗಳು ತಾಸೀಲ್‌ದಾರ್ ಮತ್ತು ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿ ಮನವಿ ಸಲ್ಲಿಸಿದರು. ನಂತರ ಮೆರವಣಿಗೆಯು ನಗರದ ಮುಖ್ಯ ಬೀದಿಗಳಲ್ಲಿ ಪ್ರದರ್ಶನ ನಡೆಸಿತು.

ಬೀದರ್

ರಾಜ್ಯ ಸಂಘಟನಾ ಸಮಿತಿಯ ಸದಸ್ಯ ಹಾಗೂ ಬೀದರ್ ಘಟಕದ ಸಂಚಾಲಕ ಕಾ| ಸಂಘಶೆಟ್ಟಿ ಪಾಟೀಲ್, ದತ್ತುಹೊನ್ನಾ, ಶಾಂತಪ್ಪ, ಬಡಿಗೇರ ಬಾಬೂರಾವ್ ಮಾರುತಿ ವಿಭೂತಿ, ವೀರಾಶೆಟ್ಟಿ, ಚಂದ್ರಕಾಂತ ಇವರುಗಳ ನೇತೃತ್ವದಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಲು ಒತ್ತಾಯಿಸಿ ಹಾಗೂ ಜೀವನಾವಶ್ಯಕ ವಸ್ತುಗಳು ಮತ್ತು ಹೋಟಲ್ ಬೆಲೆಯನ್ನು ಇಳಿಸಬೇಕೆಂದು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಈ ಕಾರ್ಯಕ್ರಮದ ಬೆಂಬಲಾರ್ಥವಾಗಿ ಸ್ಕೂಲು-ಕಾಲೇಜ್ ಬಂದ್ ಮಾಡಿದ್ದಲ್ಲದೆ ಎಸ್. ಎಫ್ ಜ್ಯೂನಿಯರ್, ಬಿ. ವಿ. ಬಿ. ಸರಕಾರಿ ಜ್ಯೂನಿಯರ್ ಕಾಲೇಜ್, ಕರ್ನಾಟಕ ಕಾಲೇಜ್ ಹಾಗೂ ತಾಂತ್ರಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮೆರವಣಿಗೆಯಲ್ಲಿ 1000 ಕ್ಕೆ ಮೇಲ್ಪಟ್ಟು ವಿದ್ಯಾರ್ಥಿ ಯುವ ಜನರು ಭಾಗವಹಿಸಿದ್ದರು. ನಂತರ ಜಿಲ್ಲಾಧಿಕಾರಿಗಳನ್ನು ಭೇಟಿಯಾಗಿ ಸ್ಥಳೀಯ ಸಮಸ್ಯೆಗಳ ಜೊತೆಯಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಯಾದರೆ ನೇರವಾಗಿ 25 ಸಾವಿರ ಹಾಗೂ ಪೂರಕವಾಗಿ ಉದ್ಭವಿಸುವ ಘಟಕಗಳಿಂದ 1 ಲಕ್ಷದಷ್ಟು ಉದ್ಯೋಗ ಲಭ್ಯವಿರುವ ವಸ್ತುಸ್ಥಿತಿಯನ್ನು ವಿವರಿಸಿದರು.

ಹರಪನ ಹಳ್ಳಿ ಬೆಲೆ ಏರಿಕೆ ವಿರೋಧಿ ದಿನಾಚರಣೆ

ಹರಪನ ಹಳ್ಳಿಯಲ್ಲಿ ಕೇಂದ್ರದ ಬೆಲೆ ಏರಿಕೆ ನೀತಿ ವಿರುದ್ಧ ದಿನಾಂಕ 18-8-1983 ರಂದು ಭಾರತ ವಿದ್ಯಾರ್ಥಿ ಫೆಡರೇಷನ್ ಮತ್ತು ಪ್ರಾಂತ ರೈತ ಸಂಘ ಬೃಹತ್ ಮೆರವಣಿಗೆಯನ್ನು ಏರ್ಪಡಿಸಿದ್ದವು. ನಗರದ ಮುಖ್ಯ ಬೀದಿಗಳಲ್ಲಿ ಘೋಷಣೆಗಳನ್ನು ಕೂಗುತ್ತ ತಹಸೀಲ್ದಾರ ಕಛೇರಿಗೆ ತೆರಳಿ ಮನವಿ ಸಲ್ಲಿಸಲಾಯಿತು. ಈ ಸಭೆಗೆ ಸುಮಾರು 1500 ವಿದ್ಯಾರ್ಥಿಗಳು ಮತ್ತು ರೈತರು ಭಾಗವಹಿಸಿದ್ದರು.

ತಹಸೀಲ್ದಾರರ ಕಛೇರಿ ಮುಂದೆ ಬಹಿರಂಗ ಸಭೆ ನಡೆಸಲಾಯಿತು. ಮೊದಲಿಗೆ ಸಭೆಯನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕ್ ಕಾರ್ಯದರ್ಶಿ ಕಾಂ. ಬಿ. ಪರಶುರಾಮ ಮಾತಾಡುತ್ತಾ ಸ್ವಾಗತ ಕೋರಿದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ S. F. I. ಕಾರ್ಯದರ್ಶಿ S. Y. ಗುರುಶಾಂತ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ C. P. I. (M) ಜಿಲ್ಲಾ ಕಾರ್ಯದರ್ಶಿಗಳು ಬೆಲೆ ನೀತಿ ವಿರುದ್ಧ ಜನರಿಗೆ ವಿವರಿಸಿದರು. ಕೊನೆಯಲ್ಲಿ ಸ್ಥಳೀಯ S. F. I. ಕಾರ್ಯದರ್ಶಿ ಕಾಂ. ಕೃಷ್ಣಾಜಿ ಕಲಾಲ್ ವಂದನೆಗಳನ್ನು ಸಲ್ಲಿಸಿದರು.

ಭೂಮಿಯ ಹಕ್ಕಿಗಾಗಿ ಜಿಲ್ಲೆಯಾದ್ಯಂತ ಹೋರಾಡುವ ನಿರ್ಧಾರ

ಸರಕಾರದ ಮೌನ :

ಸರಕಾರಿ ಭೂಮಿಯಲ್ಲಿ ವಾಸಿಸುತ್ತಾ ಬಂದಿರುವ ಬಡ ಆಗಮೆದಾರರಿಗೆ ಭೂಮಿಯ ಹಕ್ಕು ದೊರೆಯುವ ತನಕ ಹೋರಾಡುವ ಉದ್ದೇಶದಿಂದ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕುಗಳನ್ನೊಳಗೊಂಡು ಕಾಂ|| ಎಂ.ಕೆ. ಭಟ್ ಅಧ್ಯಕ್ಷತೆಯಲ್ಲಿ ರೈತ ಸಂಘದ ಹೋರಾಟ ಸಮಿತಿಯನ್ನು ರೂಪಿಸಲಾಗಿತ್ತು. ಈ ಹೋರಾಟ ಸಮಿತಿಯ ನೇತೃತ್ವದಲ್ಲಿ ಜೂನ್ 15 ರಂದು ಪುತ್ತೂರಿನಲ್ಲಿ ಮೂರೂ ತಾಲ್ಲೂಕುಗಳ ಬಡ ಆಗಮೆದಾರ (ಸರಕಾರಿ ಜಾಗದಲ್ಲಿ ವಾಸಿಸುವವ) ರ ವಿಭಾಗೀಯ ಸಮ್ಮೇಳನವು ಯಶಸ್ವಿಯಾಗಿ ನಡೆದು ರಾಜ್ಯದ ಮುಖ್ಯ ಮಂತ್ರಿಯವರಿಗೆ ಒಂದು ಮನವಿಯನ್ನು ಕಳುಹಿಸಿಕೊಡಲಾಯಿತು. ಸರಕಾರಿ ಜಾಗದಲ್ಲಿ ವಾಸ್ತವ್ಯವಿರುವ ಬಡಜನರಿಗೆ ಅವರವರ ಸ್ವಾಧೀನವಿರುವ ಭೂಮಿಯನ್ನು ಅವರವರಿಗೇ ಖಾಯಂಗೊಳಿಸಿ ಉಚಿತವಾಗಿ ಹಕ್ಕುಪತ್ರ (ಡಿ ನೋಟೀಸು)ವನ್ನು ಕೊಡಬೇಕೆಂದೂ, ಹೊಸದಾಗಿ ದರ್ಖಾಸ್ತು ಅರ್ಜಿಯನ್ನು ಸಲ್ಲಿಸಲು ಇನ್ನು ಐದು ವರ್ಷಗಳ ಕಾಲಾವಧಿಯನ್ನು ಕೊಡಬೇಕೆಂದೂ ಮುಖ್ಯಮಂತ್ರಿಯವರನ್ನು ವಿನಂತಿಸಲಾಗಿತ್ತು. ಆಗಸ್ಟ್ 15 ರೊಳಗೆ ಸರಕಾರದ ಕಡೆಯಿಂದ ಏನೂ ಪ್ರತಿಕ್ರಿಯೆ ದೊರೆಯದಿದ್ದಲ್ಲಿ ಚಳುವಳಿಯ ಮಾರ್ಗವನ್ನು ಅನುಸರಿಸಬೇಕಾಗುತ್ತದೆಂದೂ ಮನವಿಯಲ್ಲಿ ಎಚ್ಚರಿಸಲಾಗಿತ್ತು. ಆದರೆ ಮುಖ್ಯ ಮಂತ್ರಿಯವರಿಗೆ ಕೊಟ್ಟಿರುವ ಮನವಿಗೆ ಉತ್ತರವೇ ಇಲ್ಲ. ಇದಕ್ಕೂ ಮೊದಲು, ಅಂದರೆ ಮಾರ್ಚ್ 3ರಂದು ಕರ್ನಾಟಕ ಪ್ರಾಂತ ರೈತ ಸಂಘವು ಮುಖ್ಯಮಂತ್ರಿಗಳಿಗೆ ಒಂದು ಮನವಿಯನ್ನು ಸಲ್ಲಿಸಿತ್ತು. ಅದರಲ್ಲೂ ಮೊದಲ ಬೇಡಿಕೆ ಸರಕಾರಿ ಭೂಮಿಯಲ್ಲಿ ವಾಸ್ತವ್ಯವಿರುವ ಬಡಜನರಿಗೆ ಭೂಮಿಯ ಹಕ್ಕನ್ನು ಕೂಡಲೇ ಕೊಡಬೇಕೆಂಬುದೇ ಆಗಿತ್ತು. ಅದಕ್ಕೂ ಏನೂ ಉತ್ತರವೇ ದೊರೆತಿಲ್ಲ.

ಚಳುವಳಿಯ ಮಾರ್ಗ :

ಒಂದೆಡೆ ಸರಕಾರಕ್ಕೆ ಸಲ್ಲಿಸಿರುವ ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿಯವರೂ, ಸರಕಾರವೂ ಮೌನವಾಗಿದ್ದರೆ ಇನ್ನೊಂದೆಡೆ ಸರಕಾರಿ ಜಾಗದಲ್ಲಿರುವ ಬಡ ಕುಟುಂಬಗಳನ್ನು ಬಲಾತ್ಕಾರವಾಗಿ ಒಕ್ಕಲೆಬ್ಬಿಸುವ ಕ್ರಮವನ್ನು ರೆವಿನ್ಯೂ ಇಲಾಖೆಯು ಮೊದಲಿಗಿಂತಲೂ ಹೆಚ್ಚಿಗೆ ತೀವ್ರ ಗತಿಯಿಂದ ಮುಂದುವರೆಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಹೋರಾಟ ಸಮಿತಿಯು 21-8-83ರಂದು ಪುತ್ತೂರಿನಲ್ಲಿ ಸಭೆ ಸೇರಿ ಮುಂದಿನ ಕ್ರಮಗಳ ಬಗ್ಗೆ ಯೋಚಿಸಿತು. ಸರಕಾರಿ ಭೂಮಿಯಲ್ಲಿರುವ ಆಗಮೆದಾರರಿಗೆ ಹಕ್ಕುಪತ್ರ ದೊರೆಯದಿರುವ ಸಮಸ್ಯೆಯು ಜಿಲ್ಲೆ ಮತ್ತು ರಾಜ್ಯವ್ಯಾಪ್ತಿಯಿಂದಲೂ, ಸಮಸ್ಯೆಗೆ ಪರಿಹಾರ ದೊರೆಯಬೇಕಾದರೆ ಕಾನೂನಿನಲ್ಲಿ ಕೆಲವು ಬದಲಾವಣೆಗಳಾಗಬೇಕಾಗುವುದರಿಂದಲೂ ಹೋರಾಟವು ಜಿಲ್ಲೆ ಮತ್ತು ರಾಜ್ಯವ್ಯಾಪ್ತಿಯಾಗಿ ಬೆಳೆಯುವಂತಾಗಬೇಕು ; ಹಾಗೆಯೇ ಹೋರಾಟವು ಕಾರ್ಮಿಕ ವರ್ಗದ ಸೌಹಾರ್ದ ಬೆಂಬಲ ಮತ್ತು ಇತರೆ ಜನವಿಭಾಗಗಳ ಸಹಕಾರದೊಂದಿದೆ ಮುನ್ನಡೆಯುವಂತೆಯೂ ಆಗಬೇಕು ಎಂಬ ಅಭಿಪ್ರಾಯಕ್ಕೆ ಬಂದು ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಹೋರಾಟವು ಮುನ್ನಡೆಯಬೇಕೆಂಬ ಅಭಿಪ್ರಾಯವನ್ನು ಮಾಡಲಾಯಿತು.

ತಾರೀಖು 5-9-83ರಂದು ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಸಮಿತಿಯ ಸಭೆಯು ಕಾಂ| ಅಬ್ರಾಹಂ ಕರ್ಕಡ ಅವರ ಅಧ್ಯಕ್ಷತೆಯಲ್ಲಿ ಸೇರಿತು, ರೈತ ಸಂಘದ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ| ಜನಾರ್ಧನ ನಾಯಕ್, ರೈತ ಕಾರ್ಮಿಕ ಮುಂದಾಳುಗಳಾದ ಕಾಂ| ಕೆ. ಆರ್. ಶ್ರೀಯಾನ್, ಕಾಂ| ಎಂ. ಕೆ. ಭಟ್ ಮತ್ತು ಬೇರೆ ಬೇರೆ ತಾಲ್ಲೂಕುಗಳಿಂದ ಬಂದಿದ್ದ ಸದಸ್ಯರಿದ್ದ ಸಭೆಯು ಬಡ ಆಗಮೆದಾರರ ಭೂಮಿಯ ಹಕ್ಕಿಗಾಗಿ ಹೋರಾಡುವ ಪ್ರಶ್ನೆಯನ್ನು ಗಂಭೀರವಾಗಿ ಚರ್ಚಿಸಿತು. ಸರಕಾರಿ ಜಾಗದಲ್ಲಿರುವ ಬಡಜನರಿಗೆ ಭೂಮಿಯ ಹಕ್ಕು ದೊರೆಯದಿರುವ ಸಮಸ್ಯೆಯೊಂದಿಗೆ ಐದು ಸೆಂಟ್ಸ್ ಮನೆ ನಿವೇಶನದ ಜಾಗ ದೊರೆತಿದ್ದರೂ ಹಕ್ಕುಪತ್ರ ದೊರೆಯದೆ ಇರುವ ಸಮಸ್ಯೆಯನ್ನೂ ಸೇರಿಸಿಕೊಂಡು ಹೋರಾಡಬೇಕೆಂಬ ಅಭಿಪ್ರಾಯವೂ ಬಂತು. ಜಿಲ್ಲೆಯಲ್ಲಿ ಲಕ್ಷಕ್ಕಿಂತಲೂ ಹೆಚ್ಚಿನ ಬಡ ಕುಟುಂಬಗಳನ್ನು ಬಾಧಿಸುವ ಈ ಎರಡು ಸಮಸ್ಯೆಗಳ ಪರಿಹಾರಕ್ಕಾಗಿ ಕಾರ್ಮಿಕ ವರ್ಗದ ಮತ್ತು ಇತರೆ ಜನ ವಿಭಾಗದ ಬೆಂಬಲದೊಂದಿಗೆ ದೇಶಾದ್ಯಂತ ದೀರ್ಘಕಾಲದ ಹೋರಾಟವನ್ನು ನಡೆಸಲು ಜಿಲ್ಲಾ ಸಮಿತಿಯು ನಿರ್ಧರಿಸಿತು. ಈ ಸಮಸ್ಯೆಗಳಿಗ ಬೇಗನೇ ಪರಿಹಾರ ದೊರೆಯದಿದ್ದಲ್ಲಿ ಹೋರಾಟವನ್ನು ರಾಜ್ಯದ ರಾಜಧಾನಿಯ ತನಕ ಕೊಂಡೊಯ್ಯಬೇಕಾದೀತೆಂದೂ ಜಿಲ್ಲಾ ಸಮಿತಿಯು ಅಭಿಪ್ರಾಯ ಪಟ್ಟಿತು.

ಹೋರಾಟದ ರೂಪ :

ಹೋರಾಟದ ಮೊದಲ ಹಂತವಾಗಿ ಸೆಪ್ಟಂಬರ್ 30ರಂದು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಕಛೇರಿಗಳೆದುರು ಆಗಮೆದಾರರ ಮತ್ತು ಮನೆ ನಿವೇಶನದವರ ಬೃಹತ್ ಪ್ರದರ್ಶನ ಮತ್ತು ಸತ್ಯಾಗ್ರಹವನ್ನು ನಡೆಸಲು ತೀರ್ಮಾನಿಸಲಾಯಿತು. ರಾಜ್ಯ ಸರಕಾರವು

(8ನೇ ಪುಟ ನೋಡಿ)

ಭೂಮಿಯ ಹಕ್ಕಿಗಾಗಿ ಜಿಲ್ಲೆಯಾದ್ಯಂತ ಹೋರಾಡುವ ನಿರ್ಧಾರ

7ನೇ ಪುಟ ದಿಂದ)

ಮತ್ತೆಯೂ ಮೌನವಾಗಿದ್ದರೆ ಜಿಲ್ಲಾ ಕೇಂದ್ರವಾದ ಮಂಗಳೂರಿನಲ್ಲಿ ಆಗಮೆದಾರರ ಜಿಲ್ಲಾ ಮಟ್ಟದ ಸಮ್ಮೇಳನ ನಡೆಸಬೇಕೆಂದೂ, ಅಮೇಲೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ಕಾಲ್ನಡೆ ಜಾತಾದಲ್ಲಿ ಮಂಗಳೂರಿಗೆ ಬಂದು ಜಿಲ್ಲಾಧಿಕಾರಿ ಕಛೇರಿ ಎದುರು ಬೃಹತ್ ಮತ ಪ್ರದರ್ಶನ ಮತ್ತು ಸತ್ಯಾಗ್ರಹಗಳನ್ನು ನಡೆಸುವುದಕ್ಕೂ ತಯಾರಾಗಬೇಕೆಂದೂ ಅಭಿಪ್ರಾಯ ಮಾಡಲಾಯಿತು. ಮತ್ತೂ ಸರಕಾರವು ಸುಮ್ಮಗಿದ್ದರೆ ಹೋರಾಟವನ್ನು ರಾಜಧಾನಿಗೆ ಕೊಂಡಯ್ಯಲೇಬೇಕೆಂಬ ಅಭಿಪ್ರಾಯವನ್ನೂ ಮಾಡಲಾಯಿತು. ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಹೋರಾಟವನ್ನು ರಾಜ್ಯ ವ್ಯಾಪ್ತಿಯಾಗಿ ಬೆಳೆಸುವುದರ ಬಗ್ಗೆಯೂ ಯೋಚಿಸುವುದರೊಂದಿಗೆ, ಮುಂದೆ ನಡೆಯತಕ್ಕ ಹೋರಾಟಗಳಿಗೆ ಕಾರ್ಮಿಕ ವರ್ಗದ ಬೆಂಬಲ ಹಾಗೂ ಉಳಿದೆಲ್ಲ ಜನ ವಿಭಾಗದ ಸಹಕಾರವನ್ನೂ ಅಪೇಕ್ಷಿಸಿ ವಿನಂತಿಸಲಾಯಿತು. ಸೆಪ್ಟಂಬರ್ 30ರ ಕಾರ್ಯಕ್ರಮವು ಆದ ಮೇಲೆ ಜಿಲ್ಲಾ ಸಮಿತಿಯು ಸೇರಿ ಮುಂದಿನ ಕ್ರಮಗಳ ಬಗ್ಗೆ ಅಂತಿಮವಾಗಿ ತೀರ್ಮಾನ ತೆಗೆದುಕೊಳ್ಳಬೇಕೆಂದೂ ನಿರ್ಣಯಿಸಲಾಯಿತು.

ಬೇಡಿಕೆ

ಬಡಜನರ ಸ್ವಾಧೀನವಿರುವ ಸರಕಾರಿ ಭೂಮಿಯು ಫಾರೆಸ್ಟ್ ಭೂಮಿ, ಮೈನರ್‌ಫಾರೆಸ್ಟ್ ಅಥವಾ ಹೊಸದಾಗಿ ರಚಿಸಲ್ಪಟ್ಟಿರುವ ಫಾರೆಸ್ಟ್ ಭೂಮಿ, ಮುನಿಸಿಪಾಲಿಟಿಯ ಪರಿಮಿತಿಯೊಳಗಿರುವ ಭೂಮಿ ಮತ್ತು ಪರಂಬೋಕು ಭೂಮಿಯೇ ಆಗಿದ್ದರೂ ಅಥವಾ ಶ್ರೀಮಂತರ ಕುಮ್ಕಿ ಭೂಮಿಯೇ ಆಗಿದ್ದರೂ ಮತ್ತು ಅವರು ಯಾವುದೇ ತಾರೀಖಿನಿಂದ ಅದನ್ನು ಅನುಭೋಗಿಸುತ್ತಾ ಬಂದಿದ್ದರೂ ಅವರವರ ಸ್ವಾಧೀನವಿರುವ ಭೂಮಿಯನ್ನು ಅವರವರಿಗೇ ಕೂಡಲೇ ಧರ್ಮಾರ್ಥವಾಗಿ ಖಾಯಂಗೊಳಿಸಲು ಹಕ್ಕುಪತ್ರ (ಡಿ ನೋಟೀಸ್) ವನ್ನು ಕೊಡಬೇಕು. ದರಖಾಸ್ತು, ಅರ್ಜಿಯನ್ನು ಸಲ್ಲಿಸಲು ಇನ್ನೂ ಐದು ವರ್ಷಗಳ ಕಾಲಾವಧಿಯನ್ನು 'ಸಿ' ಕ್ಲಾಸ್ ಭೂಮಿಯೆಂದು ವರ್ಗೀಕರಿಸಿರುವುದನ್ನು ರದುಗೊಳಿಸಿ ಭೂರಹಿತ ಬಡಜನರಿಗೆ ಅದನ್ನು ಹಂಚಿಕೊಡಬೇಕು. ಐದು ಸೆಂಟ್ಸ್ ಮನೆ ನಿವೇಶನ ದೊರೆತು ಡಿ ನೋಟೀಸು ಅಥವಾ ಹಕ್ಕುಪತ್ರ ದೊರೆಯದವರಿಗೆ ಕೂಡಲೇ ಉಚಿತವಾಗಿ ಕೊಡಬೇಕು.

ಬೇರೆ ಬೇರೆ ಪ್ರಮಾಣದಲ್ಲಿ ರಾಜ್ಯದ ಎಲ್ಲಾ ಕಡೆಗಳಲ್ಲೂ ಇರುವ ಈ ಮೇಲಿನ ಸಮಸ್ಯೆಗಳ ಪರಿಹಾರಕ್ಕಾಗಿ ರಾಜ್ಯದಾದ್ಯಂತ ಹೋರಾಟ ನಡೆಸುವುದು ಮತ್ತು ಸೌಹಾರ್ದ ಕಾರ್ಯಕ್ರಮಗಳನ್ನು ಸಂಘಟಿಸುವುದು ಅಗತ್ಯ. ಭೂಮಿಯ ಹಕ್ಕಿಗಾಗಿ ಹೋರಾಡುವಾಗಲೇ ದೊರೆತ ಭೂಮಿಯನ್ನು ಉಳಿಸಿಕೊಳ್ಳುವುದು ಸಾಧ್ಯವಾಗಬೇಕಾದರೆ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ಸಿಗಬೇಕು ಎಂಬ ಮತ್ತು ರೈತರಿಗೆ ಸಂಬಂಧಿಸಿದ ಇತರೆ ಬೇಡಿಕೆಗಳ ಬಗ್ಗೆ ಪ್ರಚಾರ ಮತ್ತು ಬೆಂಬಲವನ್ನು ಕೊಡುತ್ತಾ ಮುನ್ನಡೆಯುವುದೂ ಅವಶ್ಯ. ಹಾಗೆ ಮಾಡಿದರೆ ಭೂಮಿಯ ಹಕ್ಕು ದೊರೆತ ಮೇಲೆಯೂ ಸಂಘಟನೆ ಬೇಕು ಎಂಬ ಭಾವನೆಯನ್ನು ಬೆಳೆಸುವುದು ಮತ್ತು ರೈತರ ಮಧ್ಯ ವಿಶಾಲ ತಳಹದಿಯ ಐಕ್ಯತೆ ತರುವುದು ಸಾಧ್ಯವಾಗಬಲ್ಲದು. ಹೋರಾಟದೊಂದಿಗೇ ಹಳ್ಳಿಯ ಬಡವರನ್ನು, ರೈತರನ್ನು ಕಾರ್ಮಿಕ ವರ್ಗದತ್ತ ಕೊಂಡೊಯ್ಯುವ ದೃಷ್ಟಿಯನ್ನಿರಿಸಿಕೊಳ್ಳುವುದು ಮತ್ತು ಸಂಘಟನೆಯನ್ನು ಬೆಳೆಸುವುದಕ್ಕೆ ಪ್ರಜ್ಞಾಪೂರ್ವಕವಾಗಿ ಶ್ರಮಿಸುವುದೂ ಅತೀ ಅಗತ್ಯ.

ಭೂ ಸುಧಾರಣಾ ಕಾನೂನುಗಳಿಗೆ ತಿದ್ದುಪಡಿ :

ತಾರೀಖು 5-9-83 ರಂದು ಸೇರಿದ್ದ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಯು ಕರ್ನಾಟಕ ಭೂ ಸುಧಾರಣ ಕಾಯ್ದೆ ಮತ್ತು ಅವನ್ನು ಜಾರಿಗೊಳಿಸುವ ಕುರಿತು ಧೀರ್ಘವಾಗಿ ವಿಮರ್ಶಿಸಿತು. ಭೂ ನ್ಯಾಯ ಮಂಡಳಿಗಳಲ್ಲಿ ರೈತ ಸಂಘದ ಪ್ರತಿನಿಧಿಗಳನ್ನು, ವಿವಿಧ ರಾಜಕೀಯ ಪಕ್ಷಗಳವರನ್ನು ಸೇರಿಸದೆ ತಮಗೆ ಇಷ್ಟಬಂದಂತೆ ಮಾಡಿರುವ ರಾಜ್ಯ ಸರಕಾರದ ಕ್ರಮವನ್ನು ಉಗ್ರವಾಗಿ ಜಿಲ್ಲಾ ಸಮಿತಿಯು ಖಂಡಿಸಿತು. ಇನ್ನಾದರೂ ಭೂ ನ್ಯಾಯ ಮಂಡಳಿಗಳಲ್ಲೂ, ಭೂ ವಿತರಣ ಸಮಿತಿಗಳಲ್ಲೂ ಪ್ರಾಂತ ರೈತ ಸಂಘದ ಹಾಗೂ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಸೇರಿಸಲು ರಾಜ್ಯ ಸರಕಾರವನ್ನು ಒತ್ತಾಯಿಸಲಾಯಿತು. ಲಕ್ಷಾಂತರ ಮಂದಿ ಕೂಲಿಗಾರರ ಕುಟುಂಬಗಳಿಗೆ ನ್ಯಾಯ ಸಿಗಬೇಕಾದ ದೃಷ್ಟಿಯಿಂದಲೂ, ಇನ್ನೂ ಹಲವು ಗೇಣೀದಾರ ರೈತರು ಅರ್ಜಿ ಸಲ್ಲಿಸದೇ ಇರುವುದರಿಂದಲೂ ಭೂ ನ್ಯಾಯ ಮಂಡಳಿಗಳಿಗೆ ಅರ್ಜಿ ಸಲ್ಲಿಸಲು ಇನ್ನೂ ಐದು ವರ್ಷಗಳ ಕಾಲಾವಧಿ ಬೇಕೆಂದು ಸಭೆಯು ಅಭಿಪ್ರಾಯ ಪಟ್ಟಿತು. ಹಾಗೆಯೇ ಹಿಂದಿನ ಗೇಣಿ ಬಾಕಿ ವಸೂಲಿಯನ್ನು ಕೈ ಬಿಡಲೂ, ಬಡ ಗೇಣೀದಾರ ರೈತರಿಗೆ ಸಹಾಯ ಮಾಡಲೆಂದು ನೇಮಿಸಲ್ಪಟ್ಟಿರುವ ಸರ್ಕಾರಿ ವಕೀಲರುಗಳ ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸುವಂತೆ ಮಾಡುವಂತೆ ಮಾಡುವುದಕ್ಕೆ ಸರಕಾರವು ಗಮನ ಹರಿಸುವಂತೆ ಒತ್ತಾಯಿಸಲೂ ತೀರ್ಮಾನಿಸಲಾಯಿತು.

ವರದಿ: ಎಂ. ಕೆ. ಭಟ್

ಚನ್ನಪಟ್ಟಣ

ಎಸ್.ಎಫ್.ಐ. ಸಭೆ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.) ಬೆಂಗಳೂರು ಜಿಲ್ಲೆಯ ಚನ್ನಪಟ್ಟಣದ ಸಂಘಟನಾ ಸಮಿತಿಯು ಸಭೆಯನ್ನು 12-9-83 ರಂದು ಕರೆಯಲಾಗಿತ್ತು. ಸಭೆಯಲ್ಲಿ 40 ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಭೆಗೆ ಹಾಜರಿದ್ದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾ|ಎನ್. ರಾಜಣ್ಣರವರು ಎಸ್. ಎಫ್. ಐ. ಧ್ಯೇಯ ಧೋರಣೆಗಳನ್ನು ಕುರಿತು ಮಾತನಾಡಿದರು. ಪ್ರಸಕ್ತ ಸಾಲಿಗೆ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಸಂಚಾಲಕರಾಗಿ ಕಾ| ಶಂಕರಪ್ಪನವರನ್ನು ಸಹ ಸಂಚಾಲಕರುಗಳನ್ನಾಗಿ ಕ್ರಮವಾಗಿ ಶಿವಬೀರಯ್ಯ ಮತ್ತು ನರಸಯ್ಯನವರನ್ನು ಸಭೆಯು ಆಯ್ಕೆ ಮಾಡಿತು. ಎಸ್.ಎಫ್.ಐ. ಮುಖಂಡರುಗಳಾದ ಕಾ| ಎಲ್ಲಪ್ಪ ಮತ್ತು ಶಿವಲಿಂಗಯ್ಯನವರುಗಳನ್ನು ಬಿ.ಸಿ.ಎಂ. ಹಾಸ್ಟಲ್ ಆಡಳಿತ ವರ್ಗವು ಹಾಸ್ಟೆಲ್‌ಗೆ ಪ್ರವೇಶ ನಿರಾಕರಿಸಿರುವುದನ್ನು ತೀವ್ರವಾಗಿ ಖಂಡಿಸಿ ಶೀಘ್ರದಲ್ಲೇ ಅವರುಗಳಿಗೆ ಪ್ರವೇಶವನ್ನು ನೀಡಬೇಕೆಂದು ಒತ್ತಾಯಿಸಲಾಯಿತು.

ಕೊಮಾರ್‍ನಹಳ್ಳಿ

ಎಚ್ಚೆತ್ತ ಬಡಜನರ ಭೂಮಿಗಾಗಿ ಹೋರಾಟ

ಬಳ್ಳಾರಿ ಜಿಲ್ಲೆಯ ಅತಿ ಹಿಂದುಳಿದ ತಾಲ್ಲೂಕಾದ ಹಡಗಲಿಯ ಬಡ ಹಳ್ಳಿಗಳಲ್ಲಿ ಎದ್ದು ಕಾಣುವ ಒಂದು ಹಳ್ಳಿ ಕೊಮಾರ್‍ನಹಳ್ಳಿ (ತಾಂಡಾ) ಇಲ್ಲಿನ ಎಲ್ಲ ಜನರೂ ಪರಿಶಿಷ್ಟ ಜಾತಿಗೆ ಸೇರಿದ ಲಂಬಾಣಿಗಳು. ಅತಿ ಬಡತನದಲ್ಲಿ ಹುಟ್ಟಿ ಅದರಲ್ಲೇ ಬೆಳೆದು, ಸಂಕಷ್ಟಗಳಲ್ಲೇ ಬೆಂದು ಬದುಕುವ-ಪರಿಸ್ಥಿತಿ ಈ ಹಳ್ಳಿಗಳದು.

ಬದಲಾವಣೆಯ ಗಾಳಿಯೇ ಬೀಸಿರದಿದ್ದ ಈ ಹಳ್ಳಿಯಲ್ಲಿ "ಕರ್ನಾಟಕ ಪ್ರಾಂತ ರೈತ ಸಂಘ"ದ ಸ್ಥಾಪನೆಯಾಗಿ ಜನ ಎಚ್ಚೆತ್ತರು. ತಮ್ಮ ಹೊಟ್ಟೆಪಾಡಿಗಾಗಿ ಪ್ರತಿ ವರ್ಷ ಕಾಫಿ ಸೀಮೆಗೆ ವಲಸೆ ಹೋಗಿ ಅಲ್ಲೂ ಶೋಷಣೆಗೊಳಗಾಗಿ ಬಳಲುತ್ತಿದ್ದ ಇವರು ತಮ್ಮ ಬದುಕಿಗೊಂದು ಅರ್ಥ ಕಂಡುಕೊಳ್ಳಲು ಯತ್ನಿಸಿದರು ರೈತ ಸಂಘದ-ಧ್ವಜದಡಿಯಲ್ಲಿ ಇಡೀ ಹಳ್ಳಿಯ ಜನ ಒಂದಾದರು.

ಈ ಹಳ್ಳಿಯ ಸುತ್ತ ಸುಮಾರು 500 ಎಕರೆಯಷ್ಟು ಕಾಯ್ದಿಟ್ಟಿರದ ಅರಣ್ಯ (Un Reserved Forest) ಇದ್ದು ಭೂಮಿ ಇರದ ಬಡರೈತರು ಅದನ್ನು ಸಾಗುವಳಿ ಮಾಡಲು ನಿರ್ಧರಿಸಿ, ಕಂಟಿ ಪಂಟಿಗಳನ್ನು ಕಿತ್ತುಹಾಕುತ್ತಿದ್ದಾಗ ಅರಣ್ಯ ಇಲಾಖೆಯ ಅಧಿಕಾರಿಗಳನ್ನೊಳಗೊಂಡು ತಾಲ್ಲೂಕಿನ ಇತರೆ ಅಧಿಕಾರಿಗಳೊಂದಿಗೆ ಪೋಲೀಸರು ಬಂದು ಇದಕ್ಕೆ ಅಡ್ಡಿಪಡಿಸಿದರು, ಆದಾಗ್ಯೂ ರೈತರು ಒಗ್ಗಟ್ಟಿನಿಂದ ತಮ್ಮ ಕಾರ್ಯ ಮುಂದುವರಿಸಿದಾಗ ದಿನಾಂಕ 11-9-83 ರಂದು ಈ ಚಳುವಳಿಯ ಪ್ರಮುಖ ನಾಯಕರಾದ ಕಾಂ| ಪಿ. ಆರ್. ವೆಂಕಟೇಶ ಪೂರ್‍ಯಾನಾಯ್ಕ, ಕೆ. ವಿ. ಪಾಟೀಲ್ ರನ್ನೊಳಗೊಂಡು ಹನ್ನೊಂದು ಜನರನ್ನ ಮಾತ್ರ ಬಂಧಿಸಲು ಪ್ರಯತ್ನಿಸಿದರು. ಆದರೆ ಇದನ್ನೊಪ್ಪದ ಹಳ್ಳಿಯ ಜನ ಪ್ರತಿಭಟನಾ ಮೆರವಣಿಗೆಯೊಂದಿಗೆ ತಾಲ್ಲೂಕು ಆಫೀಸಿಗೆ ಬಂದು ಸಾಮೂಹಿಕ ಬಂಧನಕ್ಕೊಳಗಾಗಿದ್ದಾರೆ ಅವರು ಯಾವುದೇ ಜಾಮೀನನ್ನು ನಿರಾಕರಿಸಿ, ತಮ್ಮ ಸ್ವಂತ ಜಾಮೀನಿನ ಮೇಲೆ ಮಾತ್ರ ಬಿಡುಗಡೆಯನ್ನು ಬಯಸಿದ್ದರಿಂದ ಅದು ಆಗದೇ ಸುಮಾರು 150 ಜನ ರೈತರು ಈಗ ಸೆರಮನೆ ಸೇರಿದ್ದಾರೆ.

ಯಾವುದೇ ಗಲಾಟೆ ಗಲಭೆಗಳಿಗೆ ಆಸ್ಪದ ಕೊಡದೇ ದಿನಾಂಕ 7-9-83 ರಂದು 300 ರಕ್ಕೂ ಹೆಚ್ಚು ಮಂದಿ ರೈತರು, ರೈತಸಂಘದ ಬ್ಯಾನರುಗಳೊಂದಿಗೆ ತಾಂಡಾದಿಂದ ಕಾಲ್ನಡಿಗೆಯಲ್ಲಿ ಬಂದು ಇಲ್ಲಿನ ತಾಸೀಲ್ದಾರರಿಗೆ ಮನವಿ ಅರ್ಪಿಸಿದ್ದರೆಂಬುದನ್ನು ನಾವಿಲ್ಲಿ ಸ್ಮರಿಸಬಹುದು. ಈ ಹೋರಾಟದ ಅಂಗವಾಗಿ ಇನ್ನು ಮುಂದೆ ಕೂಡಾ ನೂರುಗಟ್ಟಲೆ ರೈತರು ಮತ್ತೆ ಬಂಧನಕ್ಕೊಳಗಾಗುವ ನಿರೀಕ್ಷೆಯಿದೆ. ಹೋರಾಟ ತೀವ್ರ ಸ್ವರೂಪ ತಾಳಲಿದೆ, ಯಾವುದೇ ಕಾರಣಕ್ಕೂ ಜನ ಹೋರಾಟದ ಕಣದಿಂದ ಹಿಂತೆಗೆಯುವುದಿಲ್ಲವೆಂದು ಈಗ ಬಂಧನಕ್ಕೊಳಗಾಗದೇ ಇರುವ ರೈತ ಮುಖಂಡರು ತಿಳಿಸಿದ್ದಾರೆ.

ಏಜೆನ್ಸಿದಾರರ ಗಮನಕ್ಕೆ

'ಐಕ್ಯರಂಗ' ಹಣಕಾಸಿನ ತೊಂದರೆಯನ್ನೆದುರಿಸುತ್ತಿದೆ. ಪತ್ರಿಕೆಯ ಏಜೆನ್ಸಿದಾರರು ತಮ್ಮ ಬಿಲ್‌ನ ಹಣವನ್ನು ಕಳುಹಿಸಿಕೊಡಬೇಕೆಂದು ಕೋರುತ್ತೇವೆ. ಅನೇಕ ಏಜೆನ್ಸಿದಾರರು ಹಲವಾರು ತಿಂಗಳುಗಳ ಬಿಲ್ಲಿನ ಹಣವನ್ನು ಪಾವತಿ ಮಾಡಿಲ್ಲ. ಅಂಥವರು ಕೂಡಲೇ ತಮ್ಮ ಬಾಕಿಯನ್ನು ಪಾವತಿ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ವ್ಯವಸ್ಥಾಪಕ
ಐಕ್ಯರಂಗ

ಮುರಾನಪೂರ

ರಾಯಡೂರು ತಾಲ್ಲೂಕಿನ ಮುರಾನ್‌ಪೂರ ಕರ್ನಾಟಕ ಪ್ರಾಂತ ರೈತ ಸಂಘದ ಅಡಿಯಲ್ಲಿ ರೈತರ ಸರ್ವ ಸದಸ್ಯರ ಸಭೆಯನ್ನು ನಡೆಸಲಾಯಿತು. ಕಾ| ಚಂದ್ರಶೇಖರಬಾಳಿ ಸಂಘಟನೆಯ ಅವಶ್ಯಕತೆಯನ್ನು ವಿವರಿಸಿದರು ಕೊನೆಯಲ್ಲಿ ಮುರಾನ್‌ಪೂರ ಘಟಕವನ್ನು ರಚಿಸಲಾಯಿತು.

ಅಧ್ಯಕ್ಷರು ಮಾದೇವಪ್ಪ-ಬಾಡಲ್ಲ ಉಪಾಧ್ಯಕ್ಷರು ಹುರೇನಪ್ಪ ಕಾರ್ಯದರ್ಶಿ ಬಸಪ್ಪ ಕುರ್ಲಿ ಉಪಕಾರ್ಯದರ್ಶಿ ಹನುಮಂತಪ್ಪ ಯೊಡ

ಬಸ್ರೂರು :

ಡಿ.ವೈ.ಎಫ್.ಐ. ಸಭೆ

ತಾ| 4-9-83ರಂದು ಕುಂದಾಪುರ ತಾಲ್ಲೂಕು ಬಸ್ರೂರು ಗ್ರಾಮದ ಮಾರ್ಗೊಳ್ಳಿಯಲ್ಲಿ ಎಂ. ಗೋವಿಂದ ಅವರ ಅಧ್ಯಕ್ಷತೆಯಲ್ಲಿ DYFI ಸಭೆ ಸೇರಿತು. ಸಭೆಗೆ ಕುಂದಾಪುರ ತಾಲ್ಲೂಕಿನ DYFI ಉಪಾಧ್ಯಕ್ಷರಾದ ವೆಂಕಟೇಶ ಕೋಣೆಯವರು ಆಗಮಿಸಿದರು. ಇವರು ಯುವಕರಿಗೆ ಸಂಘಟನೆಯ ಧ್ಯೇಯೋದ್ದೇಶವನ್ನೂ, ಕಾರ್ಯಕ್ರಮವನ್ನೂ ವಿವರಿಸಿದರು. ಯುವಕರ ಸಮಸ್ಯೆಯ ವಿರುದ್ಧ ಸಂಘಟಿತರಾಗಲು ಕರೆ ಇತ್ತರು.

ಸಭೆಗೆ ಭಾಷಣಕಾರರಾಗಿ ಬಂದ ರಾಜ್ಯದ DYFI ಉಪಾಧ್ಯಕ್ಷರಾದ ಬಿ. ಮಹಬಲ ವಡೇರ ಹೋಬಳಿಯವರು ಸಭೆಯನ್ನುದ್ದೇಶಿಸಿ. ಮಾತನಾಡಿದರು.

ಸಭೆಯಲ್ಲಿ ಒಂದು ಸಮಿತಿಯನ್ನು ರಚನೆಮಾಡಲಾಯಿತು. ಸಮಿತಿಯ ಅಧ್ಯಕ್ಷರನ್ನಾಗಿ -ಎಂ. ಬಸವ ಮರ್ಡಿ. ಉಪಾಧ್ಯಕ್ಷ - ರೋಬರ್ಟ್ ನಾಯ್ಕ ಕಳಂಜ, ಕಾರ್ಯದರ್ಶಿ-ಎಂ. ಗೋವಿಂದ ಮಾರ್ಗೊಳಿ, ಜೊತೆ ಕಾರ್ಯದರ್ಶಿ -ಎಂ. ಸಂಜೀವ ಮಾರ್ಗೊಳಿ, ಅಲ್ಲದೆ 11 ಜನ ಸದಸ್ಯರು ಆಯ್ಕೆಯಾದರು. ಕೊನೆಗೆ ಎಂ. ಗೋವಿಂದನವರು ವಂದನಾರ್ಪಣೆಗೈದರು.

ನೆಲಮಂಗಲ :

ಎಸ್.ಎಫ್.ಐ. ಸಭೆ

ಬೆಂಗಳೂರು ಜಿಲ್ಲೆಯ ನೆಲಮಂಗಲದಲ್ಲಿ ದಿನಾಂಕ 13-9-83 ರಂದು ಎಸ್. ಎಫ್. ಐ.ನ ಸಭೆಯನ್ನು ನಡೆಸಿ ಪ್ರಸಕ್ತ ಸಾಲಿಗೆ ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಸಭೆಯಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ಕಾಂ| ವೈ. ಹನುಮಂತರಾಜುರವರು ಮತ್ತು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ| ಎನ್. ರಾಜಣ್ಣನವರು ಆಗಮಿಸಿ ಸಭೆಯಲ್ಲಿ ರಾಜ್ಯ ಸಮಿತಿ ತೀರ್ಮಾನಗಳನ್ನು ತಿಳಿಸಿದರು. ಸಂಘಟನೆಯನ್ನು ಬಲಿಷ್ಠವಾಗಿ ಕಟ್ಟಿ ಬೆಳೆಸಲು ಕರೆ ನೀಡಿದರು. ಪ್ರಸಕ್ತ ಸಾಲಿಗೆ ಸಂಘಟನಾ ಸಮಿತಿ ಸಂಚಾಲಕರಾಗಿ ಕಾಂ| ಎಸ್. ಎಂ. ಮೂರ್ತಿಯವರನ್ನು, ಸಹ ಸಂಚಾಲಕರಾಗಿ ಸಿದ್ದರಾಮಯ್ಯ ಮತ್ತು ರೇಣುಕಾ ಪ್ರಶಾಂತ್‌ರವರನ್ನೂ ಸಭೆಯು ಸರ್ವಾನುಮತದಿಂದ ಆಯ್ಕೆ ಮಾಡಿತು.

Printed & Published by P. Ramachandra Rao by him on behalf of the Communist Party of India (Marxist) Karnataka State Committee V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 24154
Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRARAO